# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

**ವಿಜ್ಞಾನ ಭವನ, ನಂ.24/2 ಮತ್ತು 24/3, 21ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070.**

ದಿನಾಂಕ 18.10.2015 ರ ಭಾನುವಾರದಂದು ಬೆಳಿಗ್ಗೆ 11.00 ಗಂಟೆಗೆ ವಿಜ್ಞಾನಭವನ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು ಇಲ್ಲಿ ಕರಾವಿಪದ 2014–15ನೇ ಸಾಲಿನ 34ನೆಯ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ಜರುಗಿತು. ಸಭೆಯ ನಡವಳಿಗಳು ಈ ಕೆಳಕಂಡಂತಿವೆ.

**ಸಭೆಯಲ್ಲಿ ಹಾಜರಿದ್ದವರು**

1. ಎ.ಎಚ್. ಕಬ್ಬಿಣ ಕಂತಿಮಠ, ಹಾವೇರಿ.
2. ಪ್ರೊ॥ ವಿ.ಬಿ. ದಾವಣಗೇರ, ಗದಗ.
3. ಶ್ರೀ ವಿ. ಗಿರಿಧರ, ಶಿವಮೊಗ್ಗ.
4. ಶ್ರೀ ಎನ್.ಎಂ. ಪ್ರಕಾಶ್, ದಾವಣಗೆರೆ.
5. ಶ್ರೀ ಬಿಂದುಮಾಧವ, ಶಿವಮೊಗ್ಗ
6. ಶ್ರೀ ಎಂ.ವಿ. ದೊಡ್ಡಿ, ಗದಗ
7. ಶ್ರೀ ಕೆ.ಸಿ. ಕುಲಕರ್ಣಿ, ಹಾವೇರಿ
8. ಶ್ರೀ ಟಿ.ಜಿ. ಶಿವಲಿಂಗಯ್ಯ, ತುಮಕೂರು
9. ಶ್ರೀ ಎಂ.ಡಿ. ಲತೀಫ್ ಸಾಬ್, ಚಿತ್ರದುರ್ಗ
10. ಶ್ರೀ ಅತ್ತಿಮತ್ತೂರು, ಹಾವೇರಿ
11. ಶ್ರೀ ಎಂ. ಗಡ್ಡದೇವರಮಠ, ಹಾವೇರಿ
12. ಶ್ರೀ ಆರ್.ಎಫ್. ಹಳೇರಿತ್ತಿ, ಹಾವೇರಿ.
13. ಶ್ರೀ ಎಸ್.ಎಂ. ಲೊಕೇಶ್ವರಪ್ಪ, ಶಿವಮೊಗ್ಗ
14. ಶ್ರೀ ಜೆ.ವಿ. ನರಸಣ್ಣವರ, ಬಾಗಲಕೋಟೆ
15. ಶ್ರೀ ಎಸ್.ಎಸ್. ದುಡಿಯಾಳ್, ಬಾಗಲಕೋಟೆ
16. ಡಾ. ಬಿ.ಎಲ್. ಚವಣ್, ಗದಗ.
17. ಶ್ರೀ ಪಿ.ಎಸ್. ಕಾಶಪ್ಪನವರ್, ಗದಗ
18. ಶ್ರೀ ವಿ.ಬಿ. ಶೇಷಗಿರಿ, ಗದಗ
19. ಶ್ರೀ ಎ.ವ್ಹಿ ಹಳ್ಳಿಕೇರಿ, ಗದಗ
20. ಶ್ರೀ ಬಿ.ಎನ್. ಪೋಲೀಸ್‌ಪಾಟೀಲ, ಗದಗ
21. ಶ್ರೀ ಎಂ. ಗುರುಸಿದ್ಧಸ್ವಾಮಿ, ದಾವಣಗೆರೆ
22. ಶ್ರೀ ಆವರಗೆರೆ ರುದ್ರಮುನಿ, ದಾವಣಗೆರೆ
23. ಡಾ. ಎಚ್.ಆರ್. ಸ್ವಾಮಿ, ಅರಸೀಕೆರೆ, ಹಾಸನ.
24. ಶ್ರೀ. ಟಿ.ಜಿ. ಪ್ರೇಮ್‌ಕುಮಾರ್, ಕೊಡಗು
25. ಶ್ರೀ ನಾಗೇಶ್ ಅರಳುಕುಪ್ಪೆ, ಮೈಸೂರು.
26. ಶ್ರೀ ಯು. ಭೂಪತಿ, ಬೆಂಗಳೂರು
27. ಶ್ರೀ ಎಂ. ಗಂಗಾಧರಪ್ಪ, ಮಧುಗಿರಿ
28. ಶ್ರೀ ಆರ್.ವಿ. ದೇಮಶೆಟ್ಟಿ, ಚಿಕ್ಕೋಡಿ
29. ಶ್ರೀ ಜಗದೀಶ್ ಹರಿಹರಮಠ, ಗದಗ
30. ಶ್ರೀ ದೊಡ್ಡಬಸಪ್ಪ ಬಿ., ಬಾಗಲಕೋಟೆ.
31. ಶ್ರೀ ಐ.ಹೆಚ್. ನಾಯಕ್, ಬಾಗಲಕೋಟೆ
32. ಶ್ರೀ ಸಿ.ಬಿ. ಉಪನಾಳ್, ಬಾಗಲಕೋಟೆ
33. ಶ್ರೀ ಕೆ.ವಿ. ನಾಗಲಿಂಗರೆಡ್ಡಿ, ಚಿತ್ರದುರ್ಗ
34. ಶ್ರೀ. ಎ.ಜಿ. ಹಳೇಪೇಟಿ, ಬಾಗಲಕೋಟೆ
35. ಶ್ರೀ. ಆರ್.ಎಂ. ಹಲ್ಲೂರು, ಬಾಗಲಕೋಟೆ
36. ಶ್ರೀ ಬಿ.ಎಸ್. ಕರ್ಣಂದಿ, ಬಾಗಲಕೋಟೆ
37. ಶ್ರೀ ಪ್ರೇಮಾನಂದ ಟಿ. ಸಾಲಿ, ಬಾಗಲಕೋಟೆ
38. ಶ್ರೀ ವೈ.ಎಸ್. ಬೇವಿನಗಿಡದ್, ಬಾಗಲಕೋಟೆ
39. ಶ್ರೀ ವಿ.ಎನ್. ದೊಡ್ಡಿಬಾವಿ
40. ಶ್ರೀ ಶರಣಬಸಪ್ಪ ಚಿತ್ತವಾಡಗಿ, ಬಾಗಲಕೋಟೆ
41. ಶ್ರೀ ಎಚ್.ಎಸ್.ಟಿ. ಸ್ವಾಮಿ, ಚಿತ್ರದುರ್ಗ
42. ಶ್ರೀ ಡಿ. ಮಂಜುನಾಥ್, ಬೆಂಗಳೂರು.
43. ಶ್ರೀ ಈ. ಬಸವರಾಜು, ಬೆಂಗಳೂರು
44. ಶ್ರೀ ವೈ.ಬಿ. ಗುರಣ್ಣವರ, ಹುಬ್ಬಳ್ಳಿ
45. ಶ್ರೀ ಚಂದ್ರಶೇಖರ, ಬೆಂಗಳೂರು
46. ಶ್ರೀ ಲಿಂಗಯ್ಯ ಎಚ್.ಬಿ., ಹಾವೇರಿ.
47. ಶ್ರೀ. ಎಸ್. ದಿನ್ನಿ, ಬೆಂಗಳೂರು.
48. ಶ್ರೀ ಆರ್.ಜಿ. ಅಥಣಿ, ಬೆಳಗಾವಿ
49. ಶ್ರೀ ಉಮಾಶಂಕರ್, ಬೆಂಗಳೂರು.
50. ಶ್ರೀ ಸುಬ್ರಹ್ಮಣ್ಯ ಕೆ., ಬೆಂಗಳೂರು.
51. ಶ್ರೀ ಕಡಮಜಲು ಸುಭಾಷ್ ರೈ, ದಕ್ಷಿಣ ಕನ್ನಡ
52. ಶ್ರೀ ಶಿವಬಸವ ಅಂಗಡಿ, ರಾಯಚೂರು
53. ಡಾ. ಶೇಖರ್ ಗೌಳೇರ್, ಶಿವಮೊಗ್ಗ
54. ಶ್ರೀ ಹೆಚ್.ಜಿ. ಹುದ್ದಾರ, ಬಾಗಲಕೋಟೆ
55. ಶ್ರೀ ಎಂ.ಎನ್. ಮುಷ್ಟೂರಪ್ಪ, ದಾವಣಗೆರೆ.
56. ಶ್ರೀ ಆರ್.ಎಸ್. ಪಾಟೀಲ, ಹಾವೇರಿ.
57. ಡಾ. ಲೀಲಾವತಿ ದೇವದಾಸ್, ಬೆಂಗಳೂರು.
58. ಶ್ರೀ ಪಂಡಿತ್ ಕೆ. ಬಾಳೂರೆ, ಬೀದರ
59. ಶ್ರೀ ಮಹಾರುದ್ರಪ್ಪ ಅಣದೂರೆ ಬೀದರ
60. ಡಾ. ಸಂಗಮೇಶ್ ಹಿರೇಮಠ, ಕಲ್ಬುರ್ಗಿ
61. ಶ್ರೀ ಗಿರೀಶ್ ಬಿ. ಕಡ್ಲೇವಾಡ, ಕಲ್ಬುರ್ಗಿ
62. ಶ್ರೀ ಚಳ್ಳಕೆರೆ ಯರ‍್ರಿಸ್ವಾಮಿ, ಚಿತ್ರದುರ್ಗ
63. ಡಾ॥ ವಸುಂಧರಾ ಭೂಪತಿ, ಬೆಂಗಳೂರು
64. ಪ್ರೊ॥ ಎ.ಎಸ್. ನಟರಾಜ್, ಬೆಂಗಳೂರು
65. ಶ್ರೀ ಎಸ್.ವ್ಹಿ ಸಂಕನೂರ, ಗದಗ
66. ಶ್ರೀ ಪ್ರಭು ಎಸ್. ಮಠ, ಬೆಂಗಳೂರು.
67. ಶ್ರೀ ಎಸ್.ಬಿ. ಹಿರೇಮಠ, ಹಾವೇರಿ.
68. ಶ್ರೀ ಜಿ.ಎಂ. ಪಂಚಾಕ್ಷರಿ, ಬೆಂಗಳೂರು.
69. ಶ್ರೀ ರವಿ ಕಿರಣ್, ಮೈಸೂರು
70. ಶ್ರೀಮತಿ ಕೆ.ಎಸ್. ಮಂದಾಕಿನಿ, ಬೆಂಗಳೂರು
71. ಶ್ರೀ ಟಿ.ಬಿ. ನಿರಂಜನ, ಬೆಂಗಳೂರು

72. ಶ್ರೀ ಕೊಟ್ರುಸ್ವಾಮಿ ಎಸ್.ಎಂ., ಬಳ್ಳಾರಿ
73. ಶ್ರೀ ಚಂದ್ರಯ್ಯ ಜಿ.ಕೆ. ಚಿತ್ರದುರ್ಗ.
74. ಡಾ. ವೈ. ತುಳಜಪ್ಪ, ಬೆಂಗಳೂರು
75. ಶ್ರೀ ಎಸ್.ಎಸ್. ರವೀಶ್, ರಾಯಚೂರು
76. ಶ್ರೀ ಆರ್.ಎಸ್. ಎಲಿ, ಕಲ್ಬುರ್ಗಿ
77. ಶ್ರೀ. ಬಿ.ವಿ.ವಿ. ಸುಬ್ಬರಾವ್, ಬೆಂಗಳೂರು.
78. ಡಾ. ಕೆ.ಆರ್. ಶ್ರೀಧರ್, ಶಿವಮೊಗ್ಗ
79. ಶ್ರೀ ಎಂ.ವಿ. ಬಾಲಕೃಷ್ಣೇಗೌಡ, ಮೈಸೂರು.
80. ಶ್ರೀ ಸಿ. ಕೃಷ್ಣೇಗೌಡ, ಮೈಸೂರು
81. ಶ್ರೀ ಕೆ.ಎಂ. ತಿಪ್ಪೇಸ್ವಾಮಿ, ಶಿವಮೊಗ್ಗ
82. ಶ್ರೀ ಎ.ಜಿ.ವಿ. ಪ್ರಸಾದ್, ಚಿಕ್ಕಬಳ್ಳಾಪುರ
83. ಶ್ರೀಮತಿ ಬಿ.ಜಿ. ಕುಸುಮ, ಬೆಂಗಳೂರು.
84. ಶ್ರೀಮತಿ ಲಲಿತಮ್ಮ ಡಿ., ಶಿವಮೊಗ್ಗ
85. ಶ್ರೀಮತಿ ವಿಜಯಲಕ್ಷ್ಮಿ ಆರ್.ಹೆಚ್., ರಾಯಚೂರು
86. ಶ್ರೀ ಎ. ಗೋಪಾಲ
87. ಶ್ರೀ ಪಿ.ಬಿ. ಬಂಡಿ, ಗದಗ.
88. ಶ್ರೀ ಜಿ. ಮಲ್ಲಿಕಾರ್ಜುನಯ್ಯ, ತುಮಕೂರು.
89. ಶ್ರೀ ಮೋಹನ ಬಸವನಗೌಡ ಪಾಟೀಲ, ಬೆಳಗಾವಿ
90. ಶ್ರೀ. ಕೆ.ಪಿ. ಮಂಜುನಾಥ್, ಬೆಂಗಳೂರು.
91. ಶ್ರೀ ಜೈಕುಮಾರ್ ಎಚ್.ಎಸ್., ಬೆಂಗಳೂರು.
92. ಶ್ರೀ ನಾಗರಾಜ ಅನಂತ, ಬೆಂಗಳೂರು.
93. ಕವಿತಾ ಎನ್., ಬೆಂಗಳೂರು.
94. ಡಾ. ಹನುಮಂತಪ್ಪ, ಬೆಂಗಳೂರು.
95. ಶ್ರೀ ಕೆ.ಎಸ್. ಲವಕುಮಾರ್, ಬೆಂಗಳೂರು
96. ಡಾ. ವೈ.ಸಿ. ಕಮಲ, ಬೆಂಗಳೂರು
97. ಶ್ರೀಮತಿ ವೀಣಾಕುಮಾರಿ, ರಾಯಚೂರು
98. ಶ್ರೀ ಎಸ್. ಚಟರ್ಜಿ, ಬೆಂಗಳೂರು.
99. ಶ್ರೀಮತಿ ಮಮತ, ಅರಸೀಕೆರೆ, ಹಾಸನ
100. ಶ್ರೀ ಬಿ.ಎನ್. ಶ್ರೀನಾಥ್, ಬೆಂಗಳೂರು
101. ಶ್ರೀ. ಎಸ್. ರಮೇಶ್, ತುಮಕೂರು.
102. ಶ್ರೀ ಟಿ.ಎ. ಪ್ರಶಾಂತ್ ಬಾಬು, ಮಂಡ್ಯ
103. ಶ್ರೀ ಜಗದೀಶ್
104. ಶ್ರೀ ಎಸ್.ಬಿ. ಹಿರೇಮಠ, ಗದಗ.
105. ಶ್ರೀ ಮಾಲತೇಶ್ ಎಸ್. ಅಕ್ಕೂರು, ಬೆಂಗಳೂರು
106. ಶ್ರೀಮತಿ ಶ್ರೀಮತಿ ಹರಿಪ್ರಸಾದ್, ಮೈಸೂರು
107. ಶ್ರೀ ಎಂ.ಬಿ. ಪ್ರಕಾಶ್, ಬೆಂಗಳೂರು ಗ್ರಾಮಾಂತರ
108. ಶ್ರೀ ಕ್ರಾಂತಿಕುಮಾರ್ ಸಿರ್ಸೆ, ಬೀದರ
109. ಶ್ರೀ ದಾನಿಬಾಬುರಾವ್, ಬೀದರ
110. ಶ್ರೀ ರಾಜೇಶ್, ಯಾದಗಿರಿ
111. ಶ್ರೀ ಕಾಳೇಶ್ವರ ರಾವ್, ಬೆಂಗಳೂರು.
112. ಶ್ರೀಮತಿ ಸುಮಂಗಲಾ ಮುಮ್ಮಿಗಟ್ಟಿ, ಬೆಂಗಳೂರು.
113. ಶ್ರೀಮತಿ ಸರ್ವಮಂಗಳ
114. ಶ್ರೀ ನಾಗಭೂಷಣ್
115. ಶ್ರೀ. ಎನ್.ಪಿ. ಶ್ರೀಕಂಠಯ್ಯ.
116. ಶ್ರೀ ಆರ್.ಸಿ. ಹಿರೇಮಠ,
117. ಶ್ರೀ ಸಿದ್ಧಾರ್ಥ್ ಯು.ಬಿ., ಬೆಂಗಳೂರು
118. ಶ್ರೀ ಶ್ರೀನಿವಾಸ್ ಬಿ.ವಿ.
119. ಶ್ರೀ ಎನ್. ಮೋಹನಕುಮಾರ್,
120. ಶ್ರೀ ಸಂದೀಪ್ ಕೊಳಾರ, ಗುಲ್ಬರ್ಗಾ.
121. ಡಾ. ಕುಂಟೆಪ್ಪ ಗೌರೀಪುರ, ರಾಯಚೂರು
122. ಶ್ರೀ ನಾಗಪ್ಪಗೌಡ, ಬೆಂಗಳೂರು ಗ್ರಾಮಾಂತರ
123. ಶ್ರೀ ವಿ. ಜಗನ್ನಾಥ್, ಮೈಸೂರು
124. ಶ್ರೀ ಶಿವಾನಂದ್ ಕೋಟಿ, ಬಾಗಲಕೋಟೆ
125. ಶ್ರೀ ರಾಜೇಂದ್ರ ಜಲ್ದಾರ್, ರಾಯಚೂರು
126. ಶ್ರೀ ಎಂ. ಮಧುಚಕ್ರವರ್ತಿ, ರಾಯಚೂರು
127. ಡಾ. ಜೆ.ಎಲ್. ಈರಣ್ಣ, ರಾಯಚೂರು.

ಪ್ರಾರಂಭದಲ್ಲಿ ಅಗತ್ಯ ಕೋರಂ ಇಲ್ಲದ ಕಾರಣ ಸಭೆಯನ್ನು ಅರ್ಧ ಗಂಟೆ ಮುಂದೂಡಿದ ನಂತರ ಪುನರಾರಂಭಿಸಲಾಯಿತು.

1. **ಸ್ವಾಗತ :**

ಕರಾವಿಪದ ಅಧ್ಯಕ್ಷರಾದ ಶ್ರೀ ಎಸ್. ವಿ. ಸಂಕನೂರ ಅವರು ತಮ್ಮ ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಗಳಲ್ಲಿ ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರನ್ನು ಕಾರ್ಯಕಾರಿ ಮಂಡಳಿ ಪರವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ; ಕಳೆದ ಹಲವಾರು ವರ್ಷಗಳಿಂದ ವಿಜ್ಞಾನ ಕ್ಷೇತ್ರದಲ್ಲಿ ತಮ್ಮನ್ನೇ ತಾವು ತೊಡಗಿಸಿಕೊಂಡು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನೊಂದಿಗೆ ನಿಕಟ ಸಂಪರ್ಕ ಹೊಂದಿದ್ದು ಇತ್ತೀಚೆಗೆ ನಿಧನ ಹೊಂದಿದ 4 ಜನ ಮಹನೀಯರಿಗೆ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ, ಪ್ರೊ॥ ರಾಜಶೇಖರ ಭೂಸನೂರಮಠ, ಪ್ರೊ॥ ಎಸ್.ವಿ. ಸುಬ್ರಹ್ಮಣ್ಯಂ ಹಾಗೂ ಈ ಹಿಂದೆ ಕರಾವಿಪದ ಉದ್ಯೋಗಿಯಾಗಿದ್ದ ಶ್ರೀಮತಿ ಸರ್ವಮಂಗಳ ರವರಿಗೆ ಸಂತಾಪವನ್ನು ಸೂಚಿಸುವುದರೊಂದಿಗೆ ಸಭೆಗೆ ಚಾಲನೆ ನೀಡಲಾಯಿತು. ಇದಲ್ಲದೆ ನಮ್ಮ ರಾಜ್ಯದಲ್ಲಿ ಸಾಲಬಾಧೆ ತಾಳಲಾರದೆ, ಬೆಳೆದ ಬೆಳೆಗೆ ಯೋಗ್ಯ ಬೆಲೆ ಸಿಗದ ಕಾರಣಕ್ಕಾಗಿ ನಿರಂತರವಾಗಿ ಸುಮಾರು 550ಕ್ಕೂ ಹೆಚ್ಚು ರೈತರು ಆತ್ಮಹತ್ಯೆಗೈದಿದ್ದಾರೆ. ಹಿರಿಯ ಸಾಹಿತಿ ಡಾ. ಎಂ.ಎಂ. ಕಲ್ಬುರ್ಗಿ ತಮ್ಮ ವೈಚಾರಿಕ ನಿಲುವಿಗಾಗಿ ದಾರುಣವಾಗಿ ಕೊಲೆಗೀಡಾಗಿದ್ದಾರೆ. ಅಧ್ಯಕ್ಷರು ಇವರೆಲ್ಲರ ಆತ್ಮಕ್ಕೆ ಶಾಂತಿ ಕೋರುತ್ತಾ ಮೌನಾಚರಣೆಯ ಪ್ರಸ್ತಾವನೆಯನ್ನು ಮಂಡಿಸಿದರು. ಅದರಂತೆ ಸಭೆಯಲ್ಲಿ ಹಾಜರಿದ್ದ ಸದಸ್ಯರೆಲ್ಲರೂ ಒಂದು ನಿಮಿಷದ ಮೌನ ಆಚರಿಸಿದರು.

1980ರಲ್ಲಿ ಕೆಲವು ವಿಜ್ಞಾನಾಸಕ್ತರ ಪ್ರಯತ್ನದೊಂದಿಗೆ ಸ್ಥಾಪನೆಯಾಗಿ ಇವತ್ತಿಗೆ ಪರಿಷತ್ತು ಒಂದು ಹೆಮ್ಮರವಾಗಿ ಬೆಳೆಯಲು ಸಾಧ್ಯವಾಗಿರುವುದು ಸದಸ್ಯರೆಲ್ಲರ ಸಹಕಾರ ಹಾಗೂ ಸಹಾಯದಿಂದ ಎಂದು ಅಧ್ಯಕ್ಷರು ಸ್ಮರಿಸಿದರು. ಇತ್ತೀಚೆಗೆ ಬೆಂಗಳೂರಿನಲ್ಲಿ ಆಯೋಜನೆಗೊಂಡ 22ನೇ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ ಹಾಗೂ 15ನೇ ಅಖಿಲ ಭಾರತ ಜನವಿಜ್ಞಾನ ಸಮಾವೇಶಗಳು ಯಶಸ್ವಿಯಾಗಿ ಜರುಗುವಲ್ಲಿ ಕೈಜೋಡಿಸಿದ ಕಾರ್ಯಕಾರಿ ಸಮಿತಿ, ಜಿಲ್ಲಾ ಸಮಿತಿ ಹಾಗೂ ಪರಿಷತ್ತಿನ ಸಾಮಾನ್ಯ ಸದಸ್ಯರೆಲ್ಲರಿಗೂ ಅಧ್ಯಕ್ಷರು ಅಭಿನಂದನೆ ಹಾಗೂ ಧನ್ಯವಾದಗಳನ್ನು ಅರ್ಪಿಸಿದರಲ್ಲದೆ ವಿಜ್ಞಾನ ಪರಿಷತ್ತಿನಿಂದ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾದ ಇತರೆ ಕಾರ್ಯಕ್ರಮಗಳ (ರಾಜ್ಯಮಟ್ಟದ 'ಥಟ್ ಅಂತ ಹೇಳಿ' ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮ, ಪದವಿಪೂರ್ವ ಉಪನ್ಯಾಸಕರಿಗೆ ಪುನಶ್ಚೇತನ ತರಬೇತಿ ಇತ್ಯಾದಿ) ಸಂಯೋಜಕರಿಗೂ ಸಹ ಕೃತಜ್ಞತೆ ಸಲ್ಲಿಸಿದರು. ಕಳೆದ ಸಾಲಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿಗಳಿಗೂ, ನೊಬೆಲ್ ಪ್ರಶಸ್ತಿ ವಿಜೇತರನ್ನು ಕುರಿತು ಪ್ರಸ್ತಾಪಿಸಿದರು.

2. **ನಂತರದಲ್ಲಿ, ಹಿಂದಿನ ಸರ್ವಸದ್ಯರ ಸಭೆಯ (2013-14) ನಡವಳಿಯ ಅನುಪಾಲನಾ ವರದಿಯನ್ನು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಮಂಡಿಸಿದರು. ಸದರಿ ವರದಿ ಸಂಬಂಧ ಪ್ರಾರಂಭವಾದ ಚರ್ಚೆಯಲ್ಲಿ ಹಲವಾರು ಸದಸ್ಯರು ಪ್ರಸ್ತಾಪಿಸಿದ ಅಂಶಗಳು ಹಾಗೂ ತತ್ಸಂಬಂಧ ಕೈಗೊಂಡ ನಿರ್ಣಯಗಳು / ನೀಡಿದ ಸ್ಪಷ್ಟೀಕರಣಗಳು ಈ ಮುಂದಿನಂತಿವೆ :-**

- ಡಾ. ಎಚ್.ಎನ್. ಸೃಜನಿಕ ಯೋಜನೆ ಕುರಿತು 2014-15ರಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಕೊನೆ ಗಳಿಗೆಯಲ್ಲಿ ಅನುದಾನವನ್ನು ಸರ್ಕಾರದ ವತಿಯಿಂದ ರಾಜ್ಯದ ಮೂರು ಕಡೆ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರಗಳ ಸ್ಥಾಪನೆಗೆ ವಿನಿಯೋಗಿಸಿದ್ದರಿಂದ ಪ್ರಸ್ತುತ ಯೋಜನೆಯನ್ನು ಕೈಬಿಡಲಾಯಿತು ಎಂಬ ಅಂಶವನ್ನು ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು. ಆದರೆ, ಪ್ರಯತ್ನವನ್ನು ಕೈ ಬಿಡದೆ ಮರು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಪುನ: ಸಲ್ಲಿಸಲು ತೀರ್ಮಾನಿಸಿದ್ದು, ಸರ್ಕಾರದಿಂದ 2015-16ರಲ್ಲಿ ಮಂಜೂರಾತಿ ದೊರೆತರೆ ಡಾ. ಎಚ್.ಎನ್. ಸೃಜನಿಕ ಕೇಂದ್ರದಲ್ಲೆ ಡಾ॥ ಸ.ಜ. ನಾಗಲೋಟಿಮಠ ವಿಜ್ಞಾನ ಮತ್ತು ಸಂಶೋಧನಾ ಪ್ರಯೋಗಾಲಯವೊಂದನ್ನು ಸ್ಥಾಪಿಸಲಾಗುವುದೆಂದು ಸ್ಪಷ್ಟೀಕರಣ ನೀಡಿದರು.

- ಪ್ರತಿಯೊಂದು ಜಿಲ್ಲೆಯಲ್ಲಿ ಸದಸ್ಯತ್ವ ಅಭಿಯಾನವನ್ನು ಕೈಗೊಳ್ಳಲಾಗಿದೆ. 2014–15ರಲ್ಲಿ ಒಟ್ಟು 118 ಜನರು ಕರಾವಿಪ ಸದಸ್ಯತ್ವ ಪಡೆದುಕೊಂಡಿರುತ್ತಾರೆ. ತಾಲ್ಲೂಕು ಮಟ್ಟದಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸದಸ್ಯತ್ವ ಅಭಿಯಾನ ಕೈಗೊಳ್ಳಬೇಕಿದೆ.

- ಕರಾವಿಪ ಮುಂಭಾಗದ 21ನೇ ಮುಖ್ಯರಸ್ತೆಗೆ "ವಿಜ್ಞಾನಭವನ ರಸ್ತೆ" ಎಂದು ನಾಮಕರಣ ಮಾಡುವ ಕುರಿತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಈ ಹಿಂದೆಯೇ ಮನವಿ ಸಲ್ಲಿಸಲಾಗಿದ್ದು ಸಧ್ಯದಲ್ಲೇ ಅಧಿಕಾರಿಗಳನ್ನು ಭೇಟಿ ಮಾಡಿ ತೀವ್ರತರ ಪ್ರಮಾಣದಲ್ಲಿ ಅನುಸರಣಾ ಕ್ರಮ ಕೈಗೊಳ್ಳಲಾಗುವುದು.

- ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶದ ರಾಷ್ಟ್ರಮಟ್ಟದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಕೃಪಾಂಕ, ಪ್ರಾತಿನಿಧ್ಯ ಹಾಗೂ ಆದ್ಯತೆ ನೀಡುವುದರ ಬಗ್ಗೆ ಶಿಕ್ಷಣ ಸಚಿವರಿಗೆ ಮನವಿ ಪತ್ರ ಬರೆಯಲಾಗಿದ್ದು ಸಚಿವರು ವಿಷಯವನ್ನು ಪರಿಶೀಲಿಸಲು ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಸೂಕ್ತ ನಿರ್ದೇಶನ ನೀಡಿರುತ್ತಾರೆ.

- ಕರಾವಿಪ ಕೇಂದ್ರ ಕಚೇರಿಯಲ್ಲಿ ಯೋಜನಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ವಿ.ಎಸ್. ಸರ್ವದೆಯವರನ್ನು ಜಿಲ್ಲಾ ಸಮಿತಿಗಳೊಂದಿಗೆ ಸಮನ್ವಯಕ್ಕಾಗಿ ಸಂಪರ್ಕಾಧಿಕಾರಿ ಎಂದು ನಿಯೋಜಿಸಲಾಗಿದೆ.

- ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶದ ಸಂದರ್ಭದಲ್ಲಿ ಪ್ರತಿಯೊಂದು ಜಿಲ್ಲೆಗೆ ಬಿಡುಗಡೆಯಾಗುತ್ತಿರುವ ಅನುದಾನದ ಮೊತ್ತವನ್ನು ಹೆಚ್ಚುವರಿಯಾಗಿ ನೀಡುವಂತೆ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ.

- ಜಿಲ್ಲಾಮಟ್ಟದ ಮಕ್ಕಳ ವಿಜ್ಞಾನ ಸಮಾವೇಶಗಳಲ್ಲಿ ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ವಿದ್ಯಾರ್ಥಿಗಳ ಭಾಗವಹಿಸುತ್ತಿದ್ದು, ಮಕ್ಕಳ ಯೋಜನೆಗಳನ್ನು ಶಿಕ್ಷಕರು, ಮುಖ್ಯೋಪಾಧ್ಯಾಯರು ಹಾಗೂ ಪಾಲಕರ ಸಹಕಾರದೊಂದಿಗೆ ಆಯ್ಕೆ ಮಾಡಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

- ಕೇಂದ್ರ ಸರ್ಕಾರದ ರಾಷ್ಟ್ರೀಯ ಪರಿಸರ ಜಾಗೃತಿ ಆಂದೋಲನ ಕಾರ್ಯಕ್ರಮದಡಿಯಲ್ಲಿ MOEF ನಿಂದ ಸುಮಾರು 10 ವರ್ಷಕ್ಕೂ ಮೀರಿದ ಅವಧಿಗೆ ಒಟ್ಟು ರೂ. 15.00 ಲಕ್ಷ RRA Fee ಸ್ವೀಕೃತಿಯಾಗಬೇಕಿದ್ದು, ಈ ಸಂಬಂಧ ಕರಾವಿಪವು ನಿರಂತರವಾಗಿ ಅನುಸರಣಾ ಕ್ರಮ ಕೈಗೊಳ್ಳುತ್ತಿರುವುದನ್ನು ಅಧ್ಯಕ್ಷರು ಸ್ಪಷ್ಟಪಡಿಸಿದರು. ಈ ಕುರಿತು ಕೇಂದ್ರ ಸರ್ಕಾರ ಅರಣ್ಯ ಮತ್ತು ಪರಿಸರ ಇಲಾಖೆಗೆ ಹಲವಾರು ಬಾರಿ ಪತ್ರ ಬರೆಯಲಾಗಿದ್ದು, ಡಾ. ಎಚ್.ಎಸ್. ನಿರಂಜನ ಆರಾಧ್ಯ, ಪ್ರೊ॥ ಸಿ.ಡಿ. ಪಾಟೀಲ್, ಹಾಗೂ ಶ್ರೀ ಯರ್ರಿಸ್ವಾಮಿಯವರು ಖುದ್ದಾಗಿ ದೆಹಲಿಗೆ ವೈಯಕ್ತಿಕವಾಗಿ ಭೇಟಿ ನೀಡಿ ಸಂಬಂಧಪಟ್ಟ ಅಧಿಕಾರಿಯೊಂದಿಗೆ ಸಮಾಲೋಚಿಸಿದಾಗ್ಯೂ ಇದುವರೆಗೆ ಯಾವುದೇ ಪ್ರಯೋಜನವಾಗದ ಕಾರಣ ಈ ಯೋಜನೆಯನ್ನು ಕೈಬಿಡಲು ಕಾರ್ಯಕಾರಿ ಮಂಡಳಿಯ ಸಭೆಯಲ್ಲಿ ಚರ್ಚಿಸಿದೆವು. ಆದರೆ ಇದು ಪರಿಸರಕ್ಕೆ ಸಂಬಂಧಿಸಿದ ಕಾರ್ಯಕ್ರಮವಾಗಿದ್ದು ಜನಸಾಮಾನ್ಯರನ್ನು ತಲುಪುವ ನಿಟ್ಟಿನಲ್ಲಿ ಹೆಚ್ಚಿನ ಪಾತ್ರ ವಹಿಸುತ್ತಿರುವುದರಿಂದ ಯೋಜನೆಯನ್ನು ಮುಂದುವರಿಸಲು ತೀರ್ಮಾನಿಸಲಾಯಿತು.

- ದಾನಿ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಕಾರ್ಯಕಾರಿ ಸಮಿತಿ ಸದಸ್ಯರ ಸಂಖ್ಯೆಯನ್ನು ನಿಗದಿಗೊಳಿಸುವುದು. ಗುಪ್ತ ಮತದಾನ ವ್ಯವಸ್ಥೆಯನ್ನೊಳಗೊಂಡಂತೆ ಚುನಾವಣಾ ನಿಯಮಗಳನ್ನು ಪರಿಷ್ಕರಿಸುವುದು. ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರು ಜಿಲ್ಲಾ ಸಮಿತಿಗಳಲ್ಲಿ ಯಾವ ಪದಾಧಿಕಾರಿ ಜವಾಬ್ದಾರಿಯನ್ನು ಹೊಂದಿರಕೂಡದು. ಜಿಲ್ಲಾ ಸಮಿತಿಗಳು ಕರ್ನಾಟಕ ಸಂಘ ಸಂಸ್ಥೆಗಳ ನೋಂದಣಿ ಕಾಯ್ದೆಯಡಿಯಲ್ಲಿ ನೋಂದಾಯಿಸಿರಬೇಕು. ಕರಾವಿಪ ಕಾರ್ಯಕಾರಿ ಸಮಿತಿಯಲ್ಲಿ ಹಾಗೂ ಜಿಲ್ಲಾ ಸಮಿತಿಗಳಲ್ಲಿ ದಲಿತರು ಹಾಗೂ ಮಹಿಳೆಯರಿಗೆ ಪ್ರಾತಿನಿಧ್ಯ ನೀಡುವುದು. ಕರಾವಿಪ ಸದಸ್ಯರ ಸಂಖ್ಯೆ ಹೆಚ್ಚಾಗಬೇಕು. ಎಲ್ಲಾ ಜಿಲ್ಲೆಗಳಲ್ಲಿ ಸದಸ್ಯತ್ವ ಅಭಿಯಾನ ಕೈಗೊಳ್ಳಬೇಕು. ಸದಸ್ಯತ್ವ ಶುಲ್ಕವನ್ನು ಕಡಿಮೆ ಮಾಡಬೇಕು.

- ಪರಿಷತ್ತಿನ ಬೈಲಾ ಪರಿಷ್ಕರಣೆಗೆ ಸಂಬಂಧಿಸಿದಂತೆ ಸರ್ವಸದಸ್ಯರ ವಿಶೇಷ ಮಹಾ ಸಭೆಯೊಂದನ್ನು ಕರೆಯಲಾಗುವುದೆಂದು ಸಭೆಯ ಗಮನಕ್ಕೆ ತರಲಾಯಿತು.

**ಅನುಪಾಲನಾ ವರದಿ ಬಗ್ಗೆ ಇತರೆ ಕೆಲವು ಸದಸ್ಯರ ಅಭಿಪ್ರಾಯಗಳು**

**ಶ್ರೀ ಸುಬ್ರಹ್ಮಣ್ಯ, ಬೆಂಗಳೂರು** – ಜಿಲ್ಲಾ ಸಮಿತಿಯ ವರದಿಯನ್ನು ಹಿಂದಿನ ಎ.ಜಿ.ಎಂ.ನಲ್ಲಿ ನೀಡಿದ್ದರೂ ಸಹ ನಡವಳಿಯಲ್ಲಿ ನಮೂದಾಗಿಲ್ಲದಿರುವುದನ್ನು ತಿಳಿಸಿದರು.

**– ಅಧ್ಯಕ್ಷರ ಸ್ಪಷ್ಟೀಕರಣ**

ಮುಂದೆ ಇಂತಹ ಪ್ರಕರಣಗಳು ಮರುಕಳಿಸದಂತೆ ಜಾಗ್ರತೆ ವಹಿಸಲಾಗುವುದು. ಮಹಾಸಭೆಯಲ್ಲಿ ಜಿಲ್ಲಾ ಸಮಿತಿಗಳು ನೀಡಿದ ಎಲ್ಲ ವರದಿಗಳನ್ನು ಕಡ್ಡಾಯವಾಗಿ ನಡವಳಿಯಲ್ಲಿ ನಮೂದಿಸಲಾಗುವುದು.

**ಶ್ರೀ ಈ. ಬಸವರಾಜು** – ಕರಾವಿಪ ಲೆಕ್ಕ ಪತ್ರ ವ್ಯವಹಾರಕ್ಕಾಗಿ ಒಬ್ಬ ಹಣಕಾಸು ತಜ್ಞರಿರುವುದು ಉತ್ತಮ. ಕರಾವಿಪದ ಹಣಕಾಸಿನ ರೀತಿ–ನೀತಿ, ಸನ್ನದ್ದು ಮಾಡಲು ಆರ್ಥಿಕ ವ್ಯವಹಾರಗಳ ಮಾರ್ಗದರ್ಶಿ ಕೈಪಿಡಿಯನ್ನು ತಯಾರಿಸಿಕೊಂಡು ಅದನ್ನು ಅನುಸರಿಸಿ ದೈನಂದಿನ ಕೆಲಸ–ಕಾರ್ಯಗಳು ಜರುಗಬೇಕು.

**ಪ್ರೊ॥ ಎ.ಎಸ್. ನಟರಾಜ್, ಬೆಂಗಳೂರು** – ಸೊಸೈಟಿ ಆಕ್ಟ್ ಪ್ರಕಾರ ಕಾರ್ಯಕಾರಿ ಸಮಿತಿ ಸದಸ್ಯರಲ್ಲಿ ಒಬ್ಬರನ್ನು ಗೌರವ ಆಂತರಿಕ ಲೆಕ್ಕ ಪರಿಶೋಧಕರನ್ನಾಗಿ ಆಯ್ಕೆ ಮಾಡಬೇಕು.

**– ಅಧ್ಯಕ್ಷರ ಸ್ಪಷ್ಟೀಕರಣ**

ಸದಸ್ಯರ ಸಲಹೆಯಂತೆ ಕಾರ್ಯಕಾರಿ ಸಮಿತಿ ಸದಸ್ಯರೊಬ್ಬರು ಅಥವಾ ಬೆಂಗಳೂರಿನ ಸದಸ್ಯರಲ್ಲೊಬ್ಬರನ್ನು ಲೆಕ್ಕಪತ್ರ ಶಾಖೆಯ ಕೆಲಸ ಕಾರ್ಯಗಳ ಮೇಲ್ವಿಚಾರಕರನ್ನಾಗಿ ಆಯ್ಕೆ ಮಾಡುವ ಕುರಿತು ಮುಂದಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗುವುದು.

**ಈ ಬಸವರಾಜು, ಬೆಂಗಳೂರು** – ಕರಾವಿಪದ ಮುಂಭಾಗದ ಆವರಣದಲ್ಲಿ ಪುಸ್ತಕ ಮಳಿಗೆ ಬಗ್ಗೆ ಕಳೆದ ವಾರ್ಷಿಕ ಮಹಾಸಭೆಯಲ್ಲೇ ಚರ್ಚಿಸಲಾಗಿದ್ದಾಗ್ಯೂ ಅದು ಇದುವರೆಗೂ ಕಾರ್ಯರೂಪಕ್ಕೆ ಬಂದಿರುವುದಿಲ್ಲ.

**– ಅಧ್ಯಕ್ಷರ ಸ್ಪಷ್ಟೀಕರಣ**

ಕರಾವಿಪದ ಮುಂಭಾಗದ ಆವರಣದಲ್ಲಿ ಪುಸ್ತಕ ಮಳಿಗೆಯನ್ನು ನಿರ್ಮಿಸಲು ಕಾರ್ಪೋರೇಶನ್‌ರವರ ಅನುಮತಿ ತೆಗೆದುಕೊಳ್ಳಬೇಕಿರುತ್ತದೆ. ಅಲ್ಲದೆ, ಹಾಲಿ ನಿಯಮಗಳ ಪ್ರಕಾರ ಕಾಂಪೌಂಡ್‌ನಿಂದ 20 ಅಡಿ ಜಾಗ ಬಿಟ್ಟು ಮಳಿಗೆ ಕಟ್ಟಬೇಕು. ಈ ತಾಂತ್ರಿಕ ತೊಂದರೆಯಿಂದಾಗಿ ಸಧ್ಯಕ್ಕೆ ಈ ವಿಷಯವನ್ನು ಕೈಬಿಡಲಾಗಿದೆ. ಕಾಂಪೌಂಡ್ ಹತ್ತಿರ ಅಕಾಡೆಮಿಗೆಂದು ನೀಡಿರುವ ಜಾಗವನ್ನು ಬಿಡಿಸಿಕೊಂಡು ಆ ಜಾಗದಲ್ಲಿ ಮಳಿಗೆ ಮಾಡಬೇಕೆಂಬ ಯೋಜನೆ ಇದೆ. ಈ ನಿಟ್ಟಿನಲ್ಲಿ ಆದಷ್ಟು ಬೇಗ ಮುಂದಿನ ಕ್ರಮ ಕೈಗೊಳ್ಳಲಾಗುವುದು.

**2013–14ನೇ ಸಾಲಿನ ಅನುಪಾಲನಾ ವರದಿಗೆ ಸಭೆಯು ತನ್ನ ಅನುಮೋದನೆಯನ್ನು ಸೂಚಿಸಿತು.**

**ಸೂಚಕರು :** ಶ್ರೀ ಎ.ವಿ. ಹಳ್ಳಿಕೇರಿ

**ಅನುಮೋದಕರು :** ಶ್ರೀ ಪ್ರಕಾಶ್ ಬಂಡಿ

3. **ವಾರ್ಷಿಕ ವರದಿಯ ಮಂಡನೆ :** 2014–15ನೇ ಸಾಲಿನ ಕರಾವಿಪ ವಾರ್ಷಿಕ ವರದಿಯನ್ನು ಗೌರವ ಕಾರ್ಯದರ್ಶಿ ಡಾ॥ ವಸುಂಧರಾ ಭೂಪತಿಯವರು ಮಂಡಿಸಿದರು. ಈ ಸಂಬಂಧ ಸದಸ್ಯರ ಕೆಲವು ಪ್ರಶ್ನೆಗಳಿಗೆ ಗೌರವ ಕಾರ್ಯದರ್ಶಿಯವರು ಸೂಕ್ತ ಸ್ಪಷ್ಟೀಕರಣ ನೀಡಿದರು. ಅವುಗಳ ವಿವರ ಈ ಕೆಳಗಿನಂತಿದೆ.

**ಶ್ರೀ ತಿಪ್ಪೇಸ್ವಾಮಿ – ಶಿವಮೊಗ್ಗ ಜಿಲ್ಲಾ ಕಾರ್ಯದರ್ಶಿ** – ಜಿಲ್ಲಾ ಹಂತದ ಕಾರ್ಯಕ್ರಮಗಳ ಬಗ್ಗೆ ಶಿವಮೊಗ್ಗ ಜಿಲ್ಲಾ ಸಮಿತಿಗೆ ಮುಂಚಿತವಾಗಿ ಸುತ್ತೋಲೆ ಬರುವುದಿಲ್ಲ. ದೊಡ್ಡ ಪ್ರಮಾಣದ ಕಾರ್ಯಕ್ರಮಗಳಲ್ಲಿ ಮಾತ್ರ ಕಾರ್ಯಕಾರಿ ಸಮಿತಿ ಸದಸ್ಯರು ಭಾಗವಹಿಸುತ್ತಾರೆ. ಜಿಲ್ಲಾ ಸಮಿತಿ ಕಾರ್ಯದರ್ಶಿಗೆ ಯಾವುದೇ ಮಾಹಿತಿ ಇರುವುದಿಲ್ಲ.

**– ಅಧ್ಯಕ್ಷರು ಹಾಗೂ ಗೌರವ ಕಾರ್ಯದರ್ಶಿಯವರ ಸ್ಪಷ್ಟೀಕರಣ**

ಜಿಲ್ಲಾ ಸಮಿತಿಯ ಎಲ್ಲಾ ಕಾರ್ಯಕ್ರಮಗಳ ವಿವರಗಳನ್ನು ಮುಂಚಿತವಾಗಿ ಆಯಾ ಜಿಲ್ಲೆಯ ಜಿಲ್ಲಾ ಸಮಿತಿ ಕಾರ್ಯದರ್ಶಿ / ಅಧ್ಯಕ್ಷರು ಹಾಗೂ ಸಂಬಂಧಪಟ್ಟ ಕಾರ್ಯಕಾರಿ ಸಮಿತಿ ಸದಸ್ಯರಿಗೆ ಪತ್ರ ಕಳುಹಿಸಲಾಗುತ್ತಿದ್ದು, ಈ ವ್ಯವಸ್ಥೆಯನ್ನು ಮುಂದುವರಿಸಲಾಗುವುದು.

ಎಲ್ಲ ವಿಭಾಗ ಮಟ್ಟದ ಕಾರ್ಯಕ್ರಮಗಳ ಸಂದರ್ಭದಲ್ಲಿ ಆಯಾ ಯೋಜನೆಗಳ ರಾಜ್ಯ ಸಮನ್ವಯಾಧಿಕಾರಿಗಳು ಸಂಬಂಧಪಟ್ಟ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಹಾಗೂ ಅಧ್ಯಕ್ಷರೊಡನೆ ಸಮಾಲೋಚನೆ ನಡೆಸಿದ ನಂತರ ಕಾರ್ಯಕ್ರಮ ರೂಪಿಸಬೇಕಿರುತ್ತದೆ. ಆದಾಗ್ಯೂ ಶಿವಮೊಗ್ಗ ಜಿಲ್ಲಾ ಸಮಿತಿ ಸದಸ್ಯರು ಸಭೆಯ ಗಮನಕ್ಕೆ ತಂದಿರುವಂತೆ ವಿಷಯವನ್ನು ಪುನ : ಪರಿಶೀಲಿಸಲಾಗುವುದು. ಯಾವುದೇ ಸಂದರ್ಭದಲ್ಲಿ ಸಂಬಂಧಪಟ್ಟ ಜಿಲ್ಲಾ ಸಮಿತಿಗೆ ಸಂಪೂರ್ಣ ಮಾಹಿತಿ ನೀಡಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಂತೆ ಆಯಾ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಯೋಜನೆಯ ಸಯೋಜಕರಿಗೆ ಮತ್ತೊಮ್ಮೆ ಸೂಚಿಸಲಾಗುವುದು.

**ಶ್ರೀ ಗುರುಸಿದ್ಧಸ್ವಾಮಿ, ದಾವಣಗೆರೆ**

- ಇತ್ತೀಚೆಗೆ ಜರುಗಿದ ಬೃಹತ್ ಕಾರ್ಯಕ್ರಮಗಳಾದ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ ಹಾಗೂ ಅಖಿಲ ಭಾರತ ಜನವಿಜ್ಞಾನ ಸಮಾವೇಶಗಳಿಗೆ ಸಂಬಂಧಪಟ್ಟಂತೆ ಪರಿಷತ್ತಿನ ಯಾವುದೇ ಆಹ್ವಾನ ಪತ್ರಿಕೆ ಅಥವಾ ಪತ್ರಗಳು ಪರಿಷತ್ತಿನ ಸದಸ್ಯರಿಗೆ ತಲುಪಿರುವುದಿಲ್ಲ.

- ಸರ್ವ ಸದಸ್ಯರ ಮಹಾ ಸಭೆ ಸಂದರ್ಭದಲ್ಲಿ ರಾಜ್ಯದ ವಿವಿಧ ಸ್ಥಳಗಳಿಂದ ಆಗಮಿಸುವ ಸದಸ್ಯರಿಗೆ ಬೆಳಗಿನ ಸ್ನಾನ, ಶೌಚಾದಿಗಳಿಗಾಗಿ ಸೂಕ್ತ ವ್ಯವಸ್ಥೆ ಮಾಡುವುದು ಅಗತ್ಯ. ಇದಕ್ಕಾಗಿ ಮಹಾಸಭೆಯನ್ನು ಕಲ್ಯಾಣ ಮಂಟಪಗಳಲ್ಲಿ ಆಯೋಜಿಸುವುದು ಸೂಕ್ತ.

- ಹಲವು ಕಾರ್ಯಕ್ರಮಗಳಲ್ಲಿ ಪರಿಷತ್ತಿನ ಪದಾಧಿಕಾರಿಗಳು / ಕಾರ್ಯಕಾರಿ ಸಮಿತಿ ಸದಸ್ಯರೇ ಸಂಯೋಜಕರಾಗಿರುತ್ತಾರೆ. ಇದರಿಂದ ರಾಜ್ಯದ ಕೆಲವೇ ಜಿಲ್ಲೆಗಳಲ್ಲಿ ಕಾರ್ಯಕ್ರಮಗಳು ನಡೆಯುತ್ತಿವೆ. ಎಲ್ಲಾ ಜಿಲ್ಲೆಗಳಲ್ಲಿಯೂ ಕಾರ್ಯಕ್ರಮಗಳು ಆಯೋಜನೆಯಾಗುವ ಹಾಗೆ ಕಡ್ಡಾಯವಾಗಿ ಮುಂದಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೀರ್ಮಾನ ಕೈಗೊಳ್ಳಬೇಕು.

**ಶ್ರೀ ಟಿ.ಬಿ. ನಿರಂಜನ್, ಬೆಂಗಳೂರು**

- ಬೆಂಗಳೂರಿನಲ್ಲಿ 21ನೇ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ ಹಾಗೂ ಅಖಿಲ ಭಾರತ ಜನವಿಜ್ಞಾನ ಸಮಾವೇಶದ ಮಾಹಿತಿ ಕೂಡ ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಗೆ ಬಂದಿರುವುದಿಲ್ಲ. ಮಕ್ಕಳ ವಿಜ್ಞಾನ ಸಮಾವೇಶದ ಅಂಗವಾಗಿ ಶಾಲಾ ಶಿಕ್ಷಕರಿಗೆ ತರಬೇತಿ ಕಾರ್ಯಾಗಾರಕ್ಕೆಂದು ಶಾಲಾ ಶಿಕ್ಷಕರನ್ನು ನಿಯೋಜಿಸಲು ಕೋರಿ ಉಪನಿರ್ದೇಶಕರ ಕಚೇರಿಗೆ ಭೇಟಿ ನೀಡಿದರೆ ಅದೇ ಸಮಯದಲ್ಲಿ ಶಾಲೆಗಳಿಗೆ ಪರೀಕ್ಷೆ ಸಂದರ್ಭವಿರುತ್ತದೆ. ಯಾರೂ ಸಿಗುವುದಿಲ್ಲ. ಇದೇ ರೀತಿ ಹಲವಾರು ತಾಂತ್ರಿಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಎಲ್ಲ ಕಾರ್ಯಕ್ರಮಗಳು ರಾಜ್ಯ ಸಮಿತಿಗೇ ಸೀಮಿತಗೊಳಿಸಿದರೆ ಜಿಲ್ಲಾ ಸಮಿತಿಗಳು ನಿಷ್ಕ್ರಿಯಗೊಳ್ಳುತ್ತವೆ. ಆದ್ದರಿಂದ ಜಿಲ್ಲಾ ಸಮಿತಿಗಳನ್ನು ಬಲಪಡಿಸಬೇಕಾದರೆ ಮುಂಚಿತವಾಗಿ ಯೋಜನೆ ಹಾಕಿಕೊಂಡು ಕಡೇ ಪಕ್ಷ ಬೆಂಗಳೂರು ಜಿಲ್ಲಾ ಸಮಿತಿಗಳೊಡನೆ ಸಭೆ ಸೇರಿ ಸಮಾಲೋಚನೆ ನಡೆಸಿದರೆ ಉತ್ತಮ.

**ಶ್ರೀಮತಿ ಬಿ.ಜಿ. ಕುಸುಮ :**

- 2015ರ ಅಖಿಲ ಭಾರತ ಜನವಿಜ್ಞಾನ ಸಮಾವೇಶದ ಆಹ್ವಾನ ಪತ್ರಿಕೆಯನ್ನು ಕರಾವಿಪ ಕಚೇರಿಯಿಂದ ಪಡೆದುಕೊಳ್ಳಲು ತಿಳಿಸಲಾಗಿತ್ತು. ವಯೋವೃದ್ಧರಾದ ಸದಸ್ಯರು ಕಚೇರಿಗೆ ಬಂದು ಆಹ್ವಾನ ಪತ್ರಿಕೆ ಪಡೆದುಕೊಳ್ಳುವುದು ಕಷ್ಟಕರವಾಗಿತ್ತು. ಈ ಕುರಿತು ಸಭೆ ಚರ್ಚಿಸಬೇಕು.

**– ಗೌರವ ಕಾರ್ಯದರ್ಶಿಯವರ ಸ್ಪಷ್ಟೀಕರಣ**

ಯಾವುದೇ ಆರ್ಥಿಕ ವರ್ಷದ ಆಯ–ವ್ಯಯ ಪಟ್ಟಿಯನ್ನು ತಯಾರಿಸಿ ಮುಂಚಿತವಾಗಿ ಸರ್ಕಾರಕ್ಕೆ ನೀಡಿದಾಗ್ಯೂ ಅನುದಾನ ದೊರಕುವಲ್ಲಿ ವಿಳಂಬ ಉಂಟಾಗುತ್ತದೆ. ಆದರೆ ಕಾರ್ಯಕ್ರಮಗಳನ್ನು ಮಾತ್ರ ನಿಗದಿತ ಸಮಯದಲ್ಲಿ ಜಾರಿಗೊಳಿಸಬೇಕಿರುತ್ತದೆ. ಸಂದರ್ಭಾನುಸಾರ ಕಾರ್ಯಕ್ರಮಕ್ಕೆ ಸಂಬಂಧಿಸಿದ ಪತ್ರವ್ಯವಹಾರವನ್ನು ಇ–ಮೇಲ್ ಮುಖಾಂತರ / ಕೊರಿಯರ್ ಮುಖಾಂತರ / ಅಂಚೆ ಮೂಲಕ ಮಾಡಲಾಗುತ್ತಿದೆ.

ಅಖಿಲ ಭಾರತ ಜನವಿಜ್ಞಾನ ಸಮಾವೇಶ (AIPSC) ವನ್ನು ಕರಾವಿಪ ಮತ್ತು ಬಿಜಿವಿಎಸ್ – ಎರಡೂ ಸಂಸ್ಥೆಗಳು ಸೇರಿ ಆಯೋಜಿಸಲಾಯಿತು. ಪ್ರಸ್ತುತ ಸಮಾವೇಶಕ್ಕೆ ಪ್ರತಿ ರಾಜ್ಯದಿಂದ ಕೇವಲ 20–25 ಜನಕ್ಕೆ ಸೀಮಿತಗೊಳಿಸಲು AIPSN ನಿಂದ ಒತ್ತಡವಿದ್ದಾಗ್ಯೂ, ಕರ್ನಾಟಕದಿಂದ 100 ಜನರಿಗೆ (ಪ್ರತಿನಿಧಿಗಳು / ಆಹ್ವಾನಿತರು / ಸ್ವಯಂಸೇವಕರು) ಅವಕಾಶ ಕೋರಿ ಅಂತೆಯೇ AIPSN ಅನುಮತಿ ನೀಡಿದ್ದರು. ಉಪರಾಷ್ಟ್ರಪತಿಗಳು ಭಾಗವಹಿಸಿದ್ದುದರಿಂದ ಕಾರ್ಯಕ್ರಮದಲ್ಲಿ ಸುರಕ್ಷಾ ದೃಷ್ಟಿಯಿಂದ ಸೀಮಿತ ಸಂಖ್ಯೆಯ ಸದಸ್ಯರು ಭಾಗವಹಿಸಲು ಅವಕಾಶ ನೀಡಲಾಗಿತ್ತು. ಅದರಂತೆ ಕೇಂದ್ರ ಸಚಿವರು ಭಾಗವಹಿಸುತ್ತಿದ್ದುದರಿಂದ ರಾಷ್ಟ್ರಮಟ್ಟದ ಮಕ್ಕಳ ವಿಜ್ಞಾನ ಸಮಾವೇಶ (NCSC) ಕಾರ್ಯಕ್ರಮದಲ್ಲಿಯೂ ಸುರಕ್ಷಾ ನಿಯಮಗಳನ್ನು ಪಾಲಿಸುವುದು ಅಗತ್ಯವಾಗಿತ್ತು. ಆದರೂ ಸಮಾವೇಶದ ವಿವರಗಳನ್ನು ಹಾಗೂ ಮಾಹಿತಿಯನ್ನು ಬಾಲವಿಜ್ಞಾನ ಮಾಸಪತ್ರಿಕೆಯಲ್ಲಿ ಮತ್ತು ದಿನಪತ್ರಿಕೆಗಳಲ್ಲಿ ಎಲ್ಲ ಸದಸ್ಯರಿಗೆ ತಲುಪುವಂತೆ ನೀಡಲಾಗಿತ್ತು.

**ಮಂಜುನಾಥ್ ಕೆ.ಪಿ., ಬೆಂಗಳೂರು –** ಅಖಿಲ ಭಾರತ ಜನ ವಿಜ್ಞಾನ ಸಮಾವೇಶದಲ್ಲಿ ಆಸಕ್ತಿ ಇರುವವರಿಗೆ ಭಾಗವಹಿಸಲು ಅವಕಾಶ ಕಲ್ಪಿಸಬಹುದಿತ್ತು. ಅನೇಕ ಸ್ಥಳಗಳಲ್ಲಿ ವಿವಿಧ ವಿಷಯಗಳ ಮಂಡನೆಗಳು ಜರುಗುತ್ತಿದ್ದವು. ಹಲವಾರು ವಿಷಯ ಮಂಡನೆ ನಡೆದ ಸ್ಥಳಗಳಲ್ಲಿ ಭಾಗವಹಿಸಿದ ಸದಸ್ಯರ ಸಂಖ್ಯೆ ತುಂಬಾ ಕಡಿಮೆಯಾಗಿತ್ತು. ಎಲ್ಲ ಸದಸ್ಯರಿಗೆ ಎಲ್ಲ ಸ್ಥಳಗಳಲ್ಲಿ ನಡೆದ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಬೇಕಿತ್ತು.

**– ಗೌರವ ಕಾರ್ಯದರ್ಶಿಯವರ ಸ್ಪಷ್ಟೀಕರಣ**

ಅಖಿಲ ಭಾರತ ಜನ ವಿಜ್ಞಾನ ಸಮಾವೇಶವು ರಾಷ್ಟ್ರಮಟ್ಟದ ಬೃಹತ್ ಕಾರ್ಯಕ್ರಮವಾಗಿದ್ದು ಹಲವಾರು ವಿಷಯ ಪರಿಣಿತರು ಬೇರೆ ಬೇರೆ ಸ್ಥಳಗಳಲ್ಲಿ ವಿಷಯ ಮಂಡನೆ ಮಾಡಲು ಅವಕಾಶ ಕಲ್ಪಿಸಲಾಗಿತ್ತು. ಆಹ್ವಾನಿತ ಸದಸ್ಯರಲ್ಲಿ ತಮಗೆ ಆಸಕ್ತಿ ಇರುವ ವಿಷಯ ಮಂಡನೆ ಸ್ಥಳಕ್ಕೆ ತೆರಳಿ ಭಾಗವಹಿಸಲು ಅವಕಾಶ ಹಾಗೂ ಸಂಪೂರ್ಣ ಮಾಹಿತಿ ನೀಡಲಾಗಿತ್ತು. ಅದರಂತೆ ಆಸಕ್ತಿ ಹೊಂದಿದ ಸದಸ್ಯರು ಆಯಾ ಸ್ಥಳಗಳಲ್ಲಿ ಹಾಜರಿದ್ದು, ಕಾರ್ಯಕ್ರಮ ಯಶಸ್ವಿಗೊಳಿಸಿದ್ದಾರೆ. ಸದಸ್ಯರ ಆಸಕ್ತಿಗೆ ಅನುಗುಣವಾಗಿ ಕೆಲವು ಸ್ಥಳಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹಾಗೂ ಕೆಲವು ಸ್ಥಳಗಳಲ್ಲಿ ಕಡಿಮೆ ಸಂಖ್ಯೆಯಲ್ಲಿ ಭಾಗವಹಿಸಿದ್ದುದರಿಂದ ಸದಸ್ಯರಿಗೆ ತಪ್ಪು ಕಲ್ಪನೆ ಉಂಟಾಗಿರಬಹುದಾಗಿದೆ.

**ಈ. ಬಸವರಾಜು, ಬೆಂಗಳೂರು**

- ಈ ಬಾರಿ ಕಾರ್ಯದರ್ಶಿ ವರದಿಯು ಕೋಷ್ಟಕ ರೂಪದಲ್ಲಿ ನೀಡಿರುವುದು ಅಭಿನಂದನಾರ್ಹ ಆದರೆ ಆದಷ್ಟು ಅನೌಪಚಾರಿಕ ಪದಗಳನ್ನು ಬಳಸಕೂಡದು. ಉದಾ : "ಪರಂಪರಾಗತವಾಗಿ" "ಮಹಾಮಹಿಮ". 'ಸಾವಿರಾರು ಸಂಖ್ಯೆ" ಬೇಡ. (ನಿರ್ದಿಷ್ಟ ಸಂಖ್ಯೆ ನಮೂದಿಸಬೇಕು). ವರದಿಯಲ್ಲಿ ಟೈಪಿಂಗ್ ದೋಷಗಳು ಇಲ್ಲದಿರುವಂತೆ ಜಾಗರೂಕತೆ ವಹಿಸುವುದು.

- ರಾಷ್ಟ್ರಮಟ್ಟದ ಕಾರ್ಯಕ್ರಮಗಳಿಗಳಿಗೆ ಸಂಬಂಧಿಸಿದ ವರದಿಯಲ್ಲಿ ಯಾವ ರಾಜ್ಯದಿಂದ ಎಷ್ಟೆಷ್ಟು ಜನ ಭಾಗವಹಿಸಿದ್ದರು ಎಂಬುದರ ಬಗ್ಗೆ ರಾಜ್ಯಾವಾರು ಪಟ್ಟಿಯನ್ನು ಸ್ಪಷ್ಟವಾಗಿ ನಮೂದಿಸಬೇಕು.

- "ನಿಮ್ಮ ಬಳಿಗೆ ವಿಜ್ಞಾನ" ಕಾರ್ಯಕ್ರಮವು ಯಾವ ಯಾವ ಜಿಲ್ಲೆಯಲ್ಲಿ ಜರುಗಿತು. ಎಷ್ಟು ಜನರು ಭಾಗವಹಿಸಿದ್ದರು ಎಂಬುದನ್ನು ಸ್ಪಷ್ಟಪಡಿಸಬೇಕು.

- ಸರ್. ಸಿ.ವಿ. ರಾಮನ್ – ಥಟ್ ಅಂತ ಹೇಳಿ ಕಾರ್ಯಕ್ರಮದ ವಿವರಗಳು ಬೆಂಗಳೂರಿನ ಸದಸ್ಯರಿಗೆ ಲಭ್ಯವಾಲಿಲ್ಲ.

- ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆಯ ಬಗ್ಗೆ ಬೆಂಗಳೂರು ಜಿಲ್ಲಾ ಸಮಿತಿಯ ಕಾರ್ಯದರ್ಶಿ / ಅಧ್ಯಕ್ಷರಿಗೆ ಯಾವುದೇ ಮಾಹಿತಿ ಬರಲಿಲ್ಲ.

- ರಾಷ್ಟ್ರೀಯ ಪರಿಸರ ಜಾಗೃತಿ ಆಂದೋಲನದ ಸ್ಪಷ್ಟವಾದ ವಿವರಗಳು ವರದಿಯಲ್ಲಿ ನಮೂದಾಗಿರುವುದಿಲ್ಲ.

- ಅಖಿಲ ಭಾರತ ಜನವಿಜ್ಞಾನ ಸಮಾವೇಶಕ್ಕೆಂದು ಪೂರ್ವಭಾವಿಯಾಗಿ ರೂ.15,000/– ಜಿಲ್ಲಾ ಸಮಿತಿಗೆ ನೀಡಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಆದರೆ ಅದರ ಬಗ್ಗೆ ಯಾವುದೇ ವಿವರ ಇರುವುದಿಲ್ಲ.

- ಕೆಲವು ಕಾರ್ಯಕ್ರಮಗಳನ್ನು ಕೆಲವೇ ಜಿಲ್ಲೆಗಳಲ್ಲಿ ಮಾತ್ರ ಮಾಡುತ್ತೀರಿ. ಬೆಂಗಳೂರು ಜಿಲ್ಲೆಗೆ ನೀಡುವುದಿಲ್ಲ. ಇದರ ಉದ್ದೇಶವೇನು?

- ಕಾರ್ಯದರ್ಶಿ ವರದಿಯಲ್ಲಿ ಸಂಘಟನಾತ್ಮಕವಾದ ವಿವರಗಳು ನಮೂದಾಗಬೇಕು. ಕಳೆದ ವರ್ಷ ಯಾವ ಜಿಲ್ಲೆಗಳಲ್ಲಿ ಎಷ್ಟು ಜನ ಸದಸ್ಯರು ಇದ್ದರು. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಸದಸ್ಯರ ಸಂಖ್ಯೆ ಎಷ್ಟು. ಮುಂತಾದ ವಿವರಗಳು ವರದಿಯಲ್ಲಿ ಬರಬೇಕು. ಪ್ರತಿ ಬಾರಿ ಹೆಚ್ಚು ಹೆಚ್ಚು ಕಾರ್ಯಕ್ರಮಗಳಾಗಬೇಕು. ಕಾರ್ಯಕ್ರಮಗಳ ಸಂಪೂರ್ಣ ಜವಾಬ್ದಾರಿಯನ್ನು ಆಯಾ ಜಿಲ್ಲಾ ಸಮಿತಿಗಳಿಗೆ ನೀಡಬೇಕು. ಇದರ ಜವಾಬ್ದಾರಿ ರಾಜ್ಯ ಸಮಿತಿಯದೇ ಆಗಿರುತ್ತದೆ.

**ಶ್ರೀ ಮಾಲತೇಶ್ ಅಕ್ಕೂರು, ಬೆಂಗಳೂರು** – ಬೆಂಗಳೂರು ಜಿಲ್ಲಾ ಸಮಿತಿ ಹಾಗೂ ರಾಜ್ಯ ಸಮಿತಿ ಇಬ್ಬರೂ ಸೇರಿ ಕನಿಷ್ಠ 2 ತಿಂಗಳಿಗೊಮ್ಮೆಯಾದರೂ ಸಭೆ ಸೇರಿ ಚರ್ಚಿಸಬೇಕು. ಕಾರ್ಯಕ್ರಮಗಳ ಬಗ್ಗೆ ಪಟ್ಟಿ ಮಾಡಿ. ಸಭೆಯಲ್ಲಿ ಕರಾವಿಪ ಕಾರ್ಯಕಾರಿ ಮಂಡಳಿ ಸದಸ್ಯರಿದ್ದರೆ ಉತ್ತಮ.

**ಶ್ರೀ ಟಿ.ಎ. ಪ್ರಶಾಂತ್, ಮಂಡ್ಯ** – ಮೌಢ್ಯಗಳ ಬಗ್ಗೆ ಹಲವಾರು ಸಂಘಟನೆಗಳು ಮುನ್ನುಗ್ಗಿ ಕೆಲಸ ಮಾಡುತ್ತಿವೆ. ಆದರೆ ವಿಜ್ಞಾನ ಸಂಘಟನೆಯಾಗಿ ನಾವು ಇದಕ್ಕೆ ಹೆಚ್ಚು ಒತ್ತು ಕೊಟ್ಟು ಜನಾಂದೋಲನವಾಗುವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕಿದೆ.

**ಶ್ರೀ ಆರ್.ಸಿ. ಹಿರೇಮಠ, ಬೆಂಗಳೂರು** – ಸುಮಾರು 10 ವರ್ಷಗಳಿಂದ ಕರಾವಿಪದ ಸದಸ್ಯತ್ವ ಪಡೆದಿದ್ದೇನೆ. ಕೇವಲ ಒಂದು ವರ್ಷ ಮಾತ್ರ ಬಾಲವಿಜ್ಞಾನ ಮಾಸಿಕ ಪತ್ರಿಕೆಯು ತಲುಪಿರುತ್ತದೆ. ಇದಕ್ಕೆ ಏನು ಕ್ರಮ ಕೈಗೊಂಡಿರುತ್ತೀರಿ ವಿವರಣೆ ಬೇಕಿದೆ.

**ಎಸ್.ಎಸ್. ದಿನ್ನಿ, ಬೆಂಗಳೂರು** – ನಮ್ಮ ವಿವೇಚನೆಯು ಯಾವುದೇ ಗ್ರಂಥಾಲಯದಲ್ಲಿ ಅಥವಾ ಪ್ರಯೋಗಾಲಯದಲ್ಲಿರುವುದಿಲ್ಲ. ನಮ್ಮಲ್ಲೇ ಅಡಕವಾಗಿರುತ್ತದೆ. ಈ ಬಗ್ಗೆ ಒಂದು ಸಮಿತಿ ಮಾಡಿ ಸಭೆ ಕರೆದರೆ ಅದರಲ್ಲಿ ನಾವುಗಳೂ ಸಹ ಅದರಲ್ಲಿ ಭಾಗವಹಿಸಬಹುದು.

**ಶ್ರೀ ವಿ. ಜಗನ್ನಾಥ್, ಮೈಸೂರು** – ಸಮುದಾಯದ ಮಟ್ಟಕ್ಕೆ ವಿಜ್ಞಾನವನ್ನು ಕೊಂಡೊಯ್ಯುವ ನಿಟ್ಟಿನಲ್ಲಿ ಕೆಲಸವಾಗಬೇಕು. ವಿಜ್ಞಾನ ಪರಿಷತ್ತಿಗೆ ತನ್ನದೇ ಆದ ಬದ್ಧತೆ ಇದೆ. ರಾಜ್ಯದ ಶೈಕ್ಷಣಿಕ ನೀತಿ ನಿರೂಪಣೆಯಲ್ಲಿ ಪರಿಷತ್ತು ಪ್ರಮುಖ ಪಾತ್ರ ವಹಿಸಬೇಕು. ಕೆರೆ–ಕಟ್ಟೆಗಳ ನಿರ್ವಹಣೆ ಗಟ್ಟಿಕಸ ನಿರ್ವಹಣೆ ಮುಂತಾದ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಬೇಕು. ಇದನ್ನು ಗಂಭೀರವಾಗಿ ಪರಿಗಣಿಸಬೇಕು

**ಪ್ರೊ॥ ಎ.ಎಸ್. ನಟರಾಜ್** – ಈಗಾಗಲೇ ಮೌಢ್ಯ ನಿರ್ಮೂಲನಾ ಕಾಯ್ದೆಗೆ ಶ್ರೀ ನಿಡುಮಾಮಿಡಿಯವರ ನಾಯಕತ್ವದಲ್ಲಿ ಅನೇಕ ಕಾರ್ಯಕ್ರಮಗಳು ಆಂದೋಲನಗಳು ನಡೆಯುತ್ತಿವೆ. ವಿಜ್ಞಾನ ಪರಿಷತ್ತು ಹಾಗೂ

ಜಿಲ್ಲಾ ಸಮಿತಿಗಳು, ಮತ್ತಿತರೆ ಸಂಘ ಸಂಸ್ಥೆಗಳು ಸೇರಿ ಈ ದಿಸೆಯಲ್ಲಿ ನಿರಂತರ ಹೋರಾಟ ಮಾಡಬೇಕಿದೆ. ಕರಾವಿಪದ ಮುಂದಾಳತ್ವದಲ್ಲಿ ಈ ಕೆಲಸ ಆಗಬೇಕಿದೆ. ಮುಂದೆ ವೈಜ್ಞಾನಿಕ ಮನೋಭಾವ ಬೆಳೆಸುವಲ್ಲಿ ಈ ಕಾಯ್ದೆಯನ್ನು ಜಾರಿಗೆ ತರಲು ಸರ್ಕಾರಕ್ಕೆ ಒತ್ತಾಯಿಸಬೇಕು.

**ಶ್ರೀ ರುದ್ರಮುನಿ, ದಾವಣಗೆರೆ** – ಅಧಿಕ ಪ್ರಮಾಣದಲ್ಲಿ ಅನುದಾನ ಬರುವಂತಹ ಕಾರ್ಯಕ್ರಮಗಳನ್ನು ಆಯೋಜಿಸಲು ಹೆಚ್ಚು ಶ್ರಮ ವಹಿಸಬೇಕು. ಕೇಂದ್ರ ಸರ್ಕಾರದ ಪರಿಸರ ಇಲಾಖೆಯಿಂದ ಬರಬೇಕಾಗಿರುವ ರೂ.15.00 ಲಕ್ಷಗಳ ಬಾಕಿ ಹಣವನ್ನು ಪಡೆಯಲು ಅಧ್ಯಕ್ಷರು ಶಾಸಕರಾಗಿರುವುದರಿಂದ ಇದರ ಲಾಭವನ್ನು ಬಳಸಿಕೊಂಡು ತಮ್ಮ ಪಕ್ಷದ ಹಿರಿಯ ಸದಸ್ಯರ ಮೂಲಕ ಸರ್ಕಾರಕ್ಕೆ ಒತ್ತಾಯಿಸಬೇಕು.

**– ಅಧ್ಯಕ್ಷರು ಹಾಗೂ ಗೌರವ ಕಾರ್ಯದರ್ಶಿಯವರ ಸ್ಪಷ್ಟೀಕರಣ**

- ಹಲವಾರು ಸದಸ್ಯರು ಕಾರ್ಯಕ್ರಮ ವರದಿ ಬಗ್ಗೆ ಒಳ್ಳೆಯ ಸಲಹೆಗಳನ್ನು ನೀಡಿರುವುದಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತಾ ಬಹಳ ಮುಖ್ಯವಾಗಿ ಜಿಲ್ಲಾಮಟ್ಟದಲ್ಲಿ ಜರುಗುವ ಕಾರ್ಯಕ್ರಮಗಳ ಬಗ್ಗೆ ಅನೇಕ ಸದಸ್ಯರಿಗೆ ಅಸಮಾಧಾನ ಇರುವುದು ಗಮನಕ್ಕೆ ಬಂದಿರುತ್ತದೆ. ಕೆಲವು ಕಾರ್ಯಕ್ರಮಗಳು ಜಿಲ್ಲೆಗೆ ಸೀಮಿತವಾಗಿರುತ್ತವೆ. ರಾಜ್ಯಮಟ್ಟ ಹಾಗೂ ವಿಭಾಗಮಟ್ಟದ ಕಾರ್ಯಕ್ರಮಗಳ ಕುರಿತು ಆಯಾ ಜಿಲ್ಲೆಯ ಸಂಚಾಲಕರುಗಳಿಗೆ ವಿವರಗಳನ್ನು ತಿಳಿಸಲಾಗುತ್ತದೆ. ಅವರುಗಳು ಆಯಾ ಜಿಲ್ಲೆಯ ಜಿಲ್ಲಾ ಸಮಿತಿಯೊಂದಿಗೆ ಸಭೆ ಕರೆದು ಸಮಾಲೋಚನೆ ಕೈಗೊಂಡ ನಂತರವೇ ಕಾರ್ಯಕ್ರಮ ಆಯೋಜನೆಯಾಗುತ್ತದೆ.

- ಪ್ರತಿ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ಆಯಾ ಜಿಲ್ಲೆಯ ಸದಸ್ಯರಿಗೆ ಕಡ್ಡಾಯವಾಗಿ ಕಳುಹಿಸಲಾಗುತ್ತದೆ. ಇದಕ್ಕೆ ದಾಖಲೆಯೂ ನಮ್ಮಲ್ಲಿದೆ.

- ಅಖಿಲ ಭಾರತ ಜನವಿಜ್ಞಾನ ಸಮಾವೇಶಕ್ಕೆ ಭಾಗವಹಿಸಲು AIPSN ರವರು ಸೀಮಿತಗೊಳಿಸಿದ್ದರಿಂದ ಕರಾವಿಪದಿಂದ 50 ಜನ ಹಾಗೂ ಬಿಜಿವಿಎಸ್ ನಿಂದ 50 ಜನ ಎಂದು ಆ ಮಿತಿಯೊಳಗೆ ಆಯೋಜಿಸಬೇಕಾಯಿತು. ಆದ್ದರಿಂದ ಎಲ್ಲರನ್ನೂ ಆಹ್ವಾನಿಸಲು ಸಾಧ್ಯವಾಗಲಿಲ್ಲ.

- ಮೂಢನಂಬಿಕೆ ವಿರುದ್ಧ ಕೆಲಸ ಮಾಡಲು ಕರಾವಿಪ ಯಾವಾಗಲೂ ಮುಂಚೂಣಿಯಲ್ಲಿರುತ್ತದೆ. ಇದಕ್ಕೆ ಎಲ್ಲರ ಸಹಕಾರ ಅಗತ್ಯ. ಈ ಕುರಿತು ಈಗಾಗಲೇ ಹಲವಾರು ಕಾರ್ಯಕ್ರಮಗಳನ್ನೂ ಸಹ ಹಮ್ಮಿಕೊಳ್ಳಲಾಗಿದೆ. ಆ ಕಾರ್ಯಕ್ರಮಗಳಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸದಸ್ಯರೆಲ್ಲರೂ ಭಾಗವಹಿಸಿರುತ್ತಾರೆ.

- ಮೂಢನಂಬಿಕೆಗಳ ಕುರಿತಾದ ಮಸೂದೆ ಸಂಬಂಧ ಸುಮಾರು 2 ವರ್ಷಗಳ ಹಿಂದೆಯೇ ಕರಾವಿಪದ ಅಧ್ಯಕ್ಷರು ಧಾರವಾಡದಲ್ಲಿ ಕರ್ನಾಟಕ ಲಾ ವಿಶ್ವವಿದ್ಯಾಲಯದ ಪ್ರೊಫೆಸರ್ ಅವರನ್ನು ಖುದ್ದಾಗಿ ಭೇಟಿ ಮಾಡಿ ಅವರೊಡನೆ ಕರಾವಿಪ ಪರವಾಗಿ ಸಾಕಷ್ಟು ಸಮಾಲೋಚನೆ ನಡೆಸಿ ಸರ್ಕಾರಕ್ಕೆ ಕರಡು ಮಸೂದೆಯನ್ನು ಸಲ್ಲಿಸಿದ್ದರ ಬಗ್ಗೆ ಪ್ರಸ್ತಾಪಿಸಿದರು. ಅಲ್ಲದೆ, ಕರಾವಿಪದ ಗೌರವ ಕಾರ್ಯದರ್ಶಿ ಡಾ॥ ವಸುಂಧರಾ ಭೂಪತಿಯವರನ್ನು ಒಳಗೊಂಡಂತೆ National law school of Indian University ವತಿಯಿಂದ ರಚಿತವಾದ ಸಮಿತಿಯೂ ಸಹ ಸರ್ಕಾರಕ್ಕೆ ಪ್ರತ್ಯೇಕ ಕರಡು ಮಸೂದೆಯನ್ನು ನೀಡಿದ್ದುದರ ಬಗ್ಗೆಯೂ ಸಭೆಯ ಗಮನಕ್ಕೆ ತರಲಾಯಿತು.

- ಪ್ರತಿ ವರ್ಷದಂತೆ ಪರಿಷತ್ತಿನಿಂದ ಈ ವರ್ಷವೂ ಸಹ ಬಡ್ಜೆಟ್ ತಯಾರಿಸಿ ವಿಶೇಷವಾಗಿ ಮೂಢನಂಬಿಕೆ ವಿರುದ್ಧ ಹಮ್ಮಿಕೊಳ್ಳಬೇಕಿರುವ ಹೊಸ ಕಾರ್ಯಕ್ರಮಗಳಿಗಾಗಿ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗುವುದು.

**– 2014–15ನೇ ಸಾಲಿನ ಕಾರ್ಯಕ್ರಮ ವರದಿಗೆ ಸಭೆಯು ತನ್ನ ಅನುಮೋದನೆಯನ್ನು ಸೂಚಿಸಿತು.**

**ಸೂಚಕರು :** ಶ್ರೀ ಆರ್. ಎಫ್. ಹಳೆರಿತ್ತಿ, ಲಕ್ಷ್ಮೇಶ್ವರ

**ಅನುಮೋದಕರು :** ಶ್ರೀಮತಿ ವಿಜಯಲಕ್ಷ್ಮಿ ಹಟ್ಟಿ, ರಾಯಚೂರು

## 4. 2014–15ನೇ ಸಾಲಿನ ಲೆಕ್ಕ ಪರಿಶೋಧಕರ ವರದಿ ಮಂಡನೆ :

- ಖಜಾಂಚಿ ಶ್ರೀ ಗಿರೀಶ್ ಬಿ. ಕಡ್ಲೇವಾಡ ರವರು ಸಭೆಯಲ್ಲಿ ಮಂಡಿಸಿದರು. ಅದರಂತೆ ಕೆಲವು ಸದಸ್ಯರ ಪ್ರಶ್ನೆಗಳಿಗೆ ಖಜಾಂಚಿಯವರು ಸೂಕ್ತ ಸ್ಪಷ್ಟೀಕರಣ ನೀಡಿದರು.

  **ಶ್ರೀ ಕ್ರಾಂತಿಕುಮಾರ್, ಬೀದರ್** – ಪೋಸ್ಟೇಜ್ ವೆಚ್ಚ ಕಳೆದ ವರ್ಷಕ್ಕೆ ಹೋಲಿಸಿದಾಗ ಕಡಿಮೆ ಖರ್ಚಾಗಿರುವುದು ಅಭಿನಂದನೀಯ. ಆದರೆ ಖರ್ಚು ಕಡಿಮೆಯಾಗಲು ಕೈಗೊಂಡ ಕ್ರಮಗಳೇನು ?

  **ಖಜಾಂಚಿ ಸ್ಪಷ್ಟೀಕರಣ :**

- ಕಳೆದ ವರ್ಷ (2013–14) ಕರಾವಿಪದ ಚುನಾವಣೆ ಜರುಗಿದ್ದು ಸದಸ್ಯರೆಲ್ಲರಿಗೂ ನೋಂದಾಯಿತ ಅಂಚೆ ಮೂಲಕ "ಬ್ಯಾಲೆಟ್ ಪೇಪರ್" ಕಳುಹಿಸಿ ಪುನ : "ಸ್ವಯಂ ವಿಳಾಸ ಲಕೋಟೆ"ಯಲ್ಲಿ ಅದನ್ನು ಹಿಂಪಡೆದ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವೆಚ್ಚ ತಗುಲಿತ್ತು.

- ಅಲ್ಲದೆ, ಇತ್ತೀಚೆಗೆ ಪತ್ರ ವ್ಯವಹಾರಗಳನ್ನು ಅತ್ಯವಶ್ಯಕತೆ ಇರುವ ಕಡೆ ಮಾತ್ರ ಕೊರಿಯರ್ ಮೂಲಕ ಕಳುಹಿಸಿ ಉಳಿದ ಸಂದರ್ಭಗಳಲ್ಲಿ ಅಂಚೆ ಮೂಲಕ ರವಾನಿಸಲಾಗುತ್ತಿದೆ. ಆದ್ದರಿಂದ ಈ ಬಾರಿ ಖರ್ಚು ಹೆಚ್ಚಾಗಿರುವುದಿಲ್ಲ.

- ಕರಾವಿಪ ಖಾತೆಯಲ್ಲಿ ಸರಾಸರಿ ಎಷ್ಟು ಹಣ ಇಟ್ಟುಕೊಂಡಿರುತ್ತೀರಿ.

- ಮುಂದಿನ ವಾರ್ಷಿಕ ಮಹಾಸಭೆಯ ವಾರ್ಷಿಕ ವರದಿಯಲ್ಲಿ ಬಡ್ಜೆಟ್ ಪ್ರಸ್ತಾವನೆಯು ಕಡ್ಡಾಯವಾಗಿ ನಮೂದಾಗಿರಬೇಕು.

- ಶ್ರೀ ಸುಬ್ರಹ್ಮಣ್ಯ, ಬೆಂಗಳೂರು – ಆಯ–ವ್ಯಯ ಪಟ್ಟಿಯಲ್ಲಿ ರೂ.22.00 ಲಕ್ಷಗಳಷ್ಟು ಮೊತ್ತವನ್ನು ಹೆಚ್ಚುವರಿ ಉಳಿತಾಯವಾಗಿ ನಮೂದಿಸಲಾಗಿದೆ. ಅದರಂತೆ ಕರಾವಿಪ ನೌಕರರಿಗೆ ಭತ್ಯೆ ಹಾಗೂ ಮುಂಬಡ್ತಿ ಮೊತ್ತ ನೀಡುವುದು ಬಾಕಿ ಇರುವುದರಿಂದ ಈ ಉಳಿತಾಯದ ಮೊತ್ತದಲ್ಲಿ ಅವರಿಗೆ ಬಾಕಿ ಇರುವ ಹಣವನ್ನು ನೀಡುವುದು ಪರಿಷತ್ತಿನ ಹಿತದೃಷ್ಟಿಯಿಂದ ಸೂಕ್ತವಾಗಿದೆ.

**2014–15ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯ ಸೂಚಕರು : ಶ್ರೀ ಆರ್.ಎಂ. ಹಳ್ಳೂರು, ಬಾಗಲಕೋಟೆ.**
**ಅನುಮೋದಕರು : ಶ್ರೀ ವಿ.ಬಿ. ದಾವಣಗೇರಿ, ಗದಗ.**

## 5. ಜಿಲ್ಲಾ ಸಮಿತಿ / ಘಟಕಗಳಿಂದ 2014–15ನೇ ಸಾಲಿನ ವಾರ್ಷಿಕ ವರದಿ ಮಂಡನೆ

ಈ ಕೆಳಕಂಡ ಜಿಲ್ಲಾಸಮಿತಿಗಳ ಪದಾಧಿಕಾರಿಗಳು ತಮ್ಮ ಜಿಲ್ಲೆಗೆ ಸಂಬಂಧಿಸಿದಂತೆ 2014–15ರ ವರದಿಯನ್ನು ಸಭೆಯಲ್ಲಿ ಮಂಡಿಸಿದರು / ಸಲ್ಲಿಸಿದರು.

5.1 ಜಿಲ್ಲಾ ವಿಜ್ಞಾನ ಸಮಿತಿ ಬೀದರ – ಶ್ರೀ ಪಂಡಿತ್ ಕೆ. ಬಾಳೂರೆ.

5.2 ಜಿಲ್ಲಾ ವಿಜ್ಞಾನ ಸಮಿತಿ, ಮಂಗಳೂರು – ಶ್ರೀ ಕಡಮಜಲು ಸುಭಾಶ್ ರೈ

5.3 ಜಿಲ್ಲಾ ವಿಜ್ಞಾನ ಸಮಿತಿ, ಬಾಗಲಕೋಟೆ – ಸಹಕಾರ್ಯದರ್ಶಿ.

ಅಲ್ಲದೆ, ಈ ಕೆಳಕಂಡ ಜಿಲ್ಲಾ ಸಮಿತಿಗಳ ವಾರ್ಷಿಕ ವರದಿಗಳನ್ನು ಸಂಬಂಧಪಟ್ಟವರಿಂದ ಪಡೆಯಲಾಯಿತು.

5.4 ಜಿಲ್ಲಾ ವಿಜ್ಞಾನ ಸಮಿತಿ, ಬೆಂಗಳೂರು ಉತ್ತರ

5.5 ಜಿಲ್ಲಾ ಘಟಕ ಹಾವೇರಿ

5.6 ಜಿಲ್ಲಾ ಸಮಿತಿ, ದಕ್ಷಿಣ ಜಿಲ್ಲೆ

5.7. ಜಿಲ್ಲಾ ಸಮಿತಿ, ದಾವಣಗೆರೆ.

5.8 ಜಿಲ್ಲಾ ಸಮಿತಿ, ಚಿತ್ರದುರ್ಗ.

5.9 ಜಿಲ್ಲಾ ಸಮಿತಿ, ತುಮಕೂರು.

5.10 ಬಿ.ಇ.ಎಲ್. ವಿಜ್ಞಾನ ಘಟಕ, ಬೆಂಗಳೂರು

5.11 ಜಿಲ್ಲಾ ಸಮಿತಿ, ಚಿಕ್ಕಬಳ್ಳಾಪುರ.

6. **ಲೆಕ್ಕ ಪರಿಶೋಧಕರ ನೇಮಕಾತಿ** : ಪರಿಷತ್ತಿನ ಹಾಲಿ ಲೆಕ್ಕಪರಿಶೋಧಕರಾದ ಶ್ರೀ ಅಣ್ಣಾರಾವ್ ಎಲ್. ದೇಶಪಾಂಡೆ ಇವರ 2 ವರ್ಷಗಳ ಅವಧಿಯು ಮುಕ್ತಾಯವಾಗಿದ್ದು, ಅವರನ್ನೇ ಮುಂದಿನ 2015–16ನೇ ವರ್ಷದ ಅವಧಿಗೂ ಮುಂದುವರಿಸಲು ಸಭೆಯು ನಿರ್ಣಯಿಸಿತು.

7. **ಇತರೆ ವಿಷಯಗಳು :**

**(ಅ) ಕರಾವಿಪ ಉದ್ಯೋಗಿಗಳ EPF ವಂತಿಕೆ ಪಾವತಿ ಕುರಿತು.**

ಕರಾವಿಪ ಉದ್ಯೋಗಿಗಳ EPF ವಂತಿಕೆ ಪಾವತಿಸುವಲ್ಲಿ ಅತಿಯಾದ ವಿಳಂಬವಾದ ಪ್ರಯುಕ್ತ ಭವಿಷ್ಯನಿಧಿ ಆಯುಕ್ತರು ಸುಮಾರು ರೂ.35.00 ಲಕ್ಷಗಳ ದಂಡ ವಿಧಿಸಿರುವ ಹಿನ್ನೆಲೆ ಕುರಿತು ಮಾನ್ಯ ಅಧ್ಯಕ್ಷರು ಸಭೆಗೆ ಸವಿವರವಾದ ಮಾಹಿತಿ ನೀಡಿದರು. ಈ ಸಂಬಂಧ ದಿನಾಂಕ 12.09.2015ರಂದು ಜರುಗಿದ ಪದಾಧಿಕಾರಿಗಳ ಸಭೆಯು ಪರಿಷತ್ತಿನಲ್ಲಿ ಲಭ್ಯವಿರುವ ಎಲ್ಲ ದಾಖಲೆಗಳನ್ನು ಪರಿಶೀಲಿಸಿದ್ದನ್ನು ಉಲ್ಲೇಖಿಸಿದರಲ್ಲದೆ 1986ರಿಂದ ದಂಡ ವಿಧಿಸಲಾದ ಅವಧಿಯವರೆಗಿನ (ಏಪ್ರಿಲ್ 2015) ಬೆಳವಣಿಗೆಗಳನ್ನು ಹಂತ–ಹಂತವಾಗಿ ಅಧ್ಯಕ್ಷರು ಸಭೆಯ ಮುಂದೆ ಮಂಡಿಸಿದರು. ಈ ರೀತಿ ವಿಧಿಸಲಾದ ದಂಡವನ್ನು ಮನ್ನಾ ಮಾಡುವಂತೆ ಪಿ.ಎಫ್. ಆಯುಕ್ತರಿಗೆ ಪತ್ರಗಳ ಮುಖೇನ ಮನವಿ ಮಾಡಿದ್ದಲ್ಲದೆ ಅವರನ್ನು ಹಲವಾರು ಬಾರಿ ಖುದ್ದಾಗಿ ಭೇಟಿ ಮಾಡಿ ವಿನಂತಿಸಿಕೊಳ್ಳಲಾಯಿತು.

ಆದಾಗ್ಯೂ ಭವಿಷ್ಯನಿಧಿ ಆಯುಕ್ತರು ಕರಾವಿಪದ ಖಾತೆಗಳನ್ನು ಮುಟ್ಟುಗೋಲು ಹಾಕುವಂತೆ ಎಸ್.ಬಿ.ಎಂ. ಹಾಗೂ ಆಕ್ಸಿಸ್ ಬ್ಯಾಂಕ್‌ಗಳಿಗೆ attachment ಆದೇಶದ ಮೂಲಕ ನಿರ್ದೇಶನವಿತ್ತರು. ಈ ರೀತಿ ಅತ್ಯಂತ ತುರ್ತು ಸಂದರ್ಭ ಒದಗಿ ಬಂದು ಅನ್ಯ ಮಾರ್ಗವಿಲ್ಲದಿದ್ದ ಪ್ರಯುಕ್ತ ದಂಡವನ್ನು ಪಾವತಿಸಬೇಕಾದ ಅನಿವಾರ್ಯತೆಯನ್ನು ಅಧ್ಯಕ್ಷರು ಒತ್ತಿ ಹೇಳಿದರು.

ಕರಾವಿಪವು ದಂಡವನ್ನು "ಪ್ರತಿಭಟನೆ"ಯೊಂದಿಗೆ (under protest) ಪಾವತಿಸಿದ್ದು ಭವಿಷ್ಯನಿಧಿ ಆಯುಕ್ತರ ಆದೇಶದ ವಿರುದ್ಧ ನವದೆಹಲಿಯ ಕೇಂದ್ರ ಭವಿಷ್ಯನಿಧಿ ನ್ಯಾಯಾಧೀಕರಣದಲ್ಲಿ ಪಿ.ಎಫ್. ವಿಷಯಗಳಲ್ಲಿ ಪರಿಣಿತಿ ಹೊಂದಿರುವ ವಕೀಲರೊಬ್ಬರ ಮೂಲಕ ಮೇಲ್ಮನವಿ ಸಲ್ಲಿಸಲು ಹಾಗೂ ತತ್ಸಂಬಂಧ ತಗಲುವ ವೆಚ್ಚವನ್ನು (filing charges, advocate's fee, etc.), ಭರಿಸಬೇಕಾಗುತ್ತದೆ ಎಂದು ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು. ಸಭೆಯು ಒಪ್ಪಿಗೆ ಸೂಚಿಸಿತು.

**ಅನುಮೋದಕರು : ಶ್ರೀ ಕಾಶಪ್ಪನವರ್, ಗದಗ.**

**(ಆ)ಬೈಲಾ ಪರಿಷ್ಕರಣೆ ಕುರಿತು**

ಬೈಲಾ ಪರಿಷ್ಕರಣಾ ಸಮಿತಿಯು ಸಿದ್ಧಪಡಿಸಿದ ವರದಿಯನ್ನು ಸಂಚಲಕರಾದ ಶ್ರೀ ಚಳ್ಳಕೆರೆ ಯರ್ರಿಸ್ವಾಮಿಯವರು ಸಭೆಯಲ್ಲಿ ಮಂಡಿಸಿದರು. ಅದರಂತೆ ಹಲವಾರು ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

- ಜಿಲ್ಲಾಮಟ್ಟದಲ್ಲಿ ಜಿಲ್ಲೆಗೊಬ್ಬರಂತೆ ಸದಸ್ಯರಾಗಬೇಕು.
- 34 ಜನ ಸದಸ್ಯತ್ವದ ಹೊರೆ ಕರಾವಿಪಕ್ಕೆ ಬಹಳ ದೊಡ್ಡದಾಗುತ್ತದೆ. ಪ್ರಯಾಣ ವೆಚ್ಚವನ್ನು ಭರಿಸುವುದು ಕಷ್ಟ.

- ತಾಲ್ಲೂಕಾ ಮಟ್ಟದಲ್ಲಿ ಚುನಾವಣೆ ಪ್ರಕ್ರಿಯೆಯು ಜರುಗಬೇಕು. ಚುನಾವಣೆಯು 3 ವರ್ಷದ ಬದಲಿಗೆ 5 ವರ್ಷಕ್ಕೊಮ್ಮೆ ಜರುಗುವಂತೆ ಬದಲಾಯಿಸಬೇಕು.

- ಅಂಚೆ ಮತದಾನದ ಬದಲಿಗೆ ಬ್ಯಾಲೆಟ್ ಬಾಕ್ಸ್ ಇಟ್ಟು ಗುಪ್ತ ಮತದಾನವಾಗಬೇಕು.

- ಚುನಾವಣೆಯು ಜಿಲ್ಲೆಗೊಬ್ಬರಂತೆ 34 ಶೈಕ್ಷಣಿಕ ಜಿಲ್ಲೆಗಳಲ್ಲೂ ಪ್ರತಿನಿಧಿಗಳನ್ನು ಆಯ್ಕೆ ಮಾಡುವುದು. ಆ 34 ಜನರೇ ಕಾರ್ಯಕಾರಿ ಸಮಿತಿ ಸದಸ್ಯರಾಗಿರುತ್ತಾರೆ.

- ಕರಾವಿಪದಲ್ಲಿನ ದಾನಿ ಸದಸ್ಯತ್ವ ಪಡೆದು ಕನಿಷ್ಠ ಮೂರು ವರ್ಷದ ನಂತರ ಮತದಾನದ ಹಕ್ಕು ಪಡೆಯುವಂತಾಗಬೇಕು.

- ಸರ್ಕಾರದ ನಿಯಮದಂತೆ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದಿಂದ ಒಬ್ಬರು ಹಾಗೂ ಇಬ್ಬರು ಮಹಿಳೆಯರಿಗೆ ಮೀಸಲಾತಿ ದೊರಕಬೇಕು.

- ಪ್ರತಿಷ್ಠಿತ ವಿಜ್ಞಾನಿಯೊಬ್ಬರನ್ನು ಆಯ್ಕೆ ಮಾಡಿ ರಾಜ್ಯ ಕಾರ್ಯಕಾರಿ ಸಮಿತಿಗೆ ನಾಮಾಂಕಿತಗೊಳಿಸಬೇಕು.

- ಚುನಾಯಿತ ಸದಸ್ಯರು 34 ಮಹಿಳಾ ಮೀಸಲಾತಿ–2 ಸರ್ಕಾರದ ಪದನಿಮಿತ್ತ ಸದಸ್ಯರು–3 ವಿಜ್ಞಾನಿ–2 ಪರಿಶಿಷ್ಟ ಜಾತಿ/ಪಂಗಡ ಮೀಸಲಾತಿ–2 ಒಟ್ಟಾರೆ ಸೇರಿ 43 ರಾಜ್ಯ ಕಾರ್ಯಕಾರಿ ಮಂಡಳಿಗೆ 43 ಜನರಿರಬೇಕು.

- ಒಟ್ಟು ಹತ್ತು ಜನ ಸದಸ್ಯತ್ವವನ್ನು ಹೊಂದಿದ ಜಿಲ್ಲಾ ಸಮಿತಿಯಲ್ಲಿ ಕರಾವಿಪದ ದಾನಿ ಸದಸ್ಯರೇ ಇರಬೇಕು.

- ಜಿಲ್ಲಾಮಟ್ಟದಲ್ಲಿ ಚುನಾವಣೆ ಪ್ರಕ್ರಿಯೆಯು ಜರುಗಿದರೆ ಉತ್ತಮ. ಆದರೆ ರಾಜ್ಯ ಕಾರ್ಯಕಾರಿ ಸಮಿತಿಯಲ್ಲಿ 12–14 ಜನ ಸದಸ್ಯರನ್ನು ಮಾತ್ರ ಹೊಂದಿರಬೇಕು.

- ಪ್ರತಿ ಜಿಲ್ಲೆಯಿಂದ ಪ್ರತಿನಿಧಿಗಳನ್ನು ಆಯ್ಕೆಗೊಳಿಸಿದರೆ ಎಲ್ಲ ತಾಲ್ಲೂಕು, ಘಟಕಗಳಲ್ಲಿ ಸಂಘಟನಾ ಕೆಲಸಗಳು ಸುಗಮವಾಗಿ ಆಗುತ್ತವೆ.

- ಬ್ಯಾಲೆಟ್ ಬಾಕ್ಸ್‌ನಲ್ಲಿ ಗುಪ್ತ ಮತದಾನ ಪ್ರಕ್ರಿಯೆಯಾದರೆ ಪ್ರತಿನಿಧಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಬಂದು ಮತದಾನ ಮಾಡಲು ಕಷ್ಟವಾಗುತ್ತದೆ. ಆದ್ದರಿಂದ ಅಂಚೆ ಮತದಾನವೇ ಸೂಕ್ತ.

- ಕೆಲವೊಂದು ಜಿಲ್ಲೆಯಲ್ಲಿ ಸದಸ್ಯರ ಸಂಖ್ಯೆ ಕಮ್ಮಿ ಇರುತ್ತದೆ. ಕೆಲವು ಜಿಲ್ಲೆಗಳಲ್ಲಿ ಅತೀ ಹೆಚ್ಚು ಇರುತ್ತದೆ. ಆ ಸಂದರ್ಭದಲ್ಲಿ ಬ್ಯಾಲೆಟ್ ಬಾಕ್ಸ್ ಇಟ್ಟು ಚುನಾವಣೆ ಮಾಡಿದರೆ ಕಡಿಮೆ ಸದಸ್ಯತ್ವವಿರುವ ಜಿಲ್ಲೆಗಳಿಗೆ ಅನ್ಯಾಯವಾಗುತ್ತದೆ. ಆದ್ದರಿಂದ ಕರಾವಿಪದ ಒಟ್ಟು ಸದಸ್ಯರಲ್ಲಿ ಜಾಸ್ತಿ ಸದಸ್ಯತ್ವ ಹೊಂದಿದ ಸಂಖ್ಯೆಯಿಂದ ಭಾಗಿಸಿ ಬರುವ ಅನುಪಾತದಲ್ಲಿ ಮತದಾನದ ಹಕ್ಕನ್ನು ನೀಡಬೇಕು.

- ದಾನಿ ಸದಸ್ಯತ್ವದ ಶುಲ್ಕ ಕಡಿಮೆಗೊಳಿಸಿದರೆ ಎಲ್ಲ ಜಿಲ್ಲೆಯಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ದಾನಿ ಸದಸ್ಯರಾಗಬಹುದು.

- ವಿಜ್ಞಾನ ಪರಿಷತ್ತಿನ ಧ್ಯೇಯೋದ್ದೇಶಗಳ ಬಗ್ಗೆ ಪ್ರತಿಯೊಂದು ತಾಲ್ಲೂಕು ಘಟಕಗಳ ಸಾಮಾನ್ಯ ಜನರಿಗೆ ತಲುಪುವಂತಾಗಲು ಹೆಚ್ಚು ಹೆಚ್ಚು ಸದಸ್ಯತ್ವದ ಅವಶ್ಯಕತೆ ಇದೆ. ಸಂಘಟನಾ ಕೆಲಸಗಳು ಆಗಬೇಕಿದೆ.

- ಒಂದು ಕಂದಾಯ ವಿಭಾಗದಿಂದ 3 ಜನ ಕಾರ್ಯಕಾರಿ ಮಂಡಳಿ ಸದಸ್ಯರಿರಬೇಕು.

- ಪ್ರತಿಯೊಂದು ಜಿಲ್ಲಾ ಸಮಿತಿಗಳ ಕಾರ್ಯಕ್ರಮಕ್ಕೆ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರು ಹೋಗಬೇಕು.
- ನಿರಂತರವಾಗಿ 5–6 ವರ್ಷಗಳವರೆಗೆ ಉಪಯೋಗತಾ ಪ್ರಮಾಣಪತ್ರ ನೀಡದವರ ಮೇಲೆ ಕ್ರಮ ಕೈಗೊಳ್ಳುವುದು.
- ಯಾವ ಕಾರ್ಯಕಾರಿ ಸಮಿತಿ ಸದಸ್ಯರು ನಿರಂತರವಾಗಿ 3 ವರ್ಷಗಳು ವಾರ್ಷಿಕ ಮಹಾ ಸಭೆಗೆ ಹಾಜರಾಗುವುದಿಲ್ಲವೋ ಅಂಥವರನ್ನು ಸದಸ್ಯತ್ವದಿಂದ ರದ್ದು ಮಾಡುವುದು
- ಜಿಲ್ಲಾ ಹಾಗೂ ರಾಜ್ಯ ಕಾರ್ಯಕಾರಿ ಸಮಿತಿಯಲ್ಲಿ ಶೇಕಡ 50% ಮಹಿಳೆಯರಿಗೆ ಅವಕಾಶ ನೀಡಬೇಕು.
- ಕರಾವಿಪ ಸದಸ್ಯತ್ವ ಹೊಂದಲು ಅಪೇಕ್ಷಿಸುವ ಆಸಕ್ತರು ಪರಿಷತ್ತು ನಿರ್ಧರಿಸುವಂತೆ ಕನಿಷ್ಠ ಅರ್ಹತೆ ಹೊಂದಿರಬೇಕು.

ಮೇಲೆ ಪಟ್ಟಿ ಮಾಡಲಾದ ಪರಿಷ್ಕರಣೆಗಳನ್ನು ಪರಿಶೀಲಿಸಿ ಪ್ರಸ್ತುತ ಸಭೆಯು ಸರ್ವಾನುಮತದಿಂದ ತಾತ್ವಿಕವಾಗಿ ಒಪ್ಪಿಗೆ ಸೂಚಿಸಿದ ಪ್ರಮುಖ 5 ಪರಿಷ್ಕರಣೆಗಳು ಈ ಮುಂದಿನಂತಿವೆ.

- ಕಾರ್ಯಕಾರಿ ಸಮಿತಿಗೆ ಚುನಾವಣಾ ಪ್ರಕ್ರಿಯೆಯು ಗುಪ್ತ ಮತದಾನದ ವಿಧಾನವನ್ನು ಅನುಸರಿಸಿ ಜರುಗುವಂತಾಗಬೇಕು.
- ಕಾರ್ಯಕಾರಿ ಸಮಿತಿಯಲ್ಲಿ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದಿಂದ ಒಬ್ಬರು ಹಾಗೂ ಮಹಿಳೆಯರೊಬ್ಬರಿಗೆ ಮೀಸಲಾತಿ ದೊರಕಬೇಕು. ಈ ರೀತಿ ಮೀಸಲಾತಿಗೆ ಸರದಿ ಆಧಾರದಲ್ಲಿ (rotation basis) ವಿಭಾಗಾವಾರು ಆಯ್ಕೆ ಮಾಡುವುದು.
- ತಾಲ್ಲೂಕು ಮಟ್ಟದಲ್ಲಿ ಕರಾವಿಪದ ವಿಜ್ಞಾನ ಸಮಿತಿಗಳನ್ನು ರಚಿಸುವುದು ಹಾಗೂ ಪ್ರತಿ ತಾಲ್ಲೂಕಿನಲ್ಲಿ ಘಟಕಗಳ ಸಂಖ್ಯೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ತೀವ್ರತರ ಆಂದೋಲನ ಕೈಗೊಳ್ಳುವುದು.
- ಪ್ರಸ್ತುತ ಪರಿಸ್ಥಿತಿಯಲ್ಲಿ ಕರಾವಿಪ ಸದಸ್ಯರ ಸಂಖ್ಯೆಯನ್ನು 24ಕ್ಕೇ ಸೀಮಿತಗೊಳಿಸುವುದು.
- ಸದಸ್ಯತ್ವ ಹೊಂದಿದ ಕನಿಷ್ಟ 3 ವರ್ಷಗಳು ಕಳೆದ ನಂತರ ಮತದಾನದ ಹಕ್ಕಿಗೆ ಒಳಪಡುವುದು.

ಮೇಲ್ಕಂಡ ಬೈಲಾ ಪರಿಷ್ಕರಣೆಯ ಅಂಶಗಳೂ ಸೇರಿದಂತೆ ಬೈಲಾ–ಪರಿಷ್ಕರಣಾ ಉಪಸಮಿತಿ ಹಾಗೂ ಇಂದಿನ ಸಭೆಯಲ್ಲಿ ಸದಸ್ಯರು ನೀಡಿದ ಉಳಿದೆಲ್ಲ ಸಲಹೆ–ಸೂಚನೆಗಳನ್ನು ವಿಶೇಷ ಮಹಾಸಭೆಯ ಪೂರ್ವದಲ್ಲಿ ಕಾರ್ಯಕಾರಿ ಸಮಿತಿ ಸಭೆಯೊಂದನ್ನು ಕರೆದು ಚರ್ಚಿಸಿದ ನಂತರ ಸದರೀ ಸಭೆಯು ಮಾಡುವ ಶಿಫಾರಸ್ಸಿನಂತೆ ಸಂಬಂಧಪಟ್ಟ ಅಂಶಗಳನ್ನು ವಿಶೇಷ ಮಹಾಸಭೆಯಲ್ಲಿ ಮಂಡಿಸಲಾಗುವುದು.

**ಮುಂದಿನ ವಿಶೇಷ ಮಹಾಸಭೆಯನ್ನು ಧಾರವಾಡ ವಿಜ್ಞಾನ ಕೇಂದ್ರದಲ್ಲಿ ಜರುಗಿಸಲು ಸಭೆ ಒಪ್ಪಿಗೆ ಸೂಚಿಸಿತು.**

**ಬೈಲಾ ಪರಿಷ್ಕರಣೆಗೆ ಸೂಚನೆ : ಶ್ರೀ ಗಡ್ಡದೇವರ ಮಠ, ಹಾವೇರಿ ಅನುಮೋದನೆ : ಶ್ರೀ ಟಿ.ವಿ. ನರಸಣ್ಣನವರ, ಬಾಗಲಕೋಟೆ**

(ಇ) ಶ್ರೀ ಯು. ಭೂಪತಿಯವರ ಸಲಹೆಯಂತೆ ಕಾರ್ಯಕಾರಿ ಸಮಿತಿಯಲ್ಲಿ ಶೇಕಡಾ 50% ಮಹಿಳೆಯರಿರುವುದು ಸೂಕ್ತ. ಕರಾವಿಪದಲ್ಲಿ ಪ್ರಸ್ತುತ ಗೌರವ ಕಾರ್ಯದರ್ಶಿ ಮಹಿಳೆ ಇರುವುದರಿಂದ ಅವರ ಅವಧಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರ ಸದಸ್ಯತ್ವವನ್ನು ಮಾಡಲು ಶ್ರಮ ವಹಿಸಬೇಕು ಎಂದು ದಾವಣಗೆರೆಯ ಶ್ರೀ ವೀಣಾಕುಮಾರಿಯವರು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಸಭೆ ಇದನ್ನು ಒಪ್ಪಿತು.

8. ಕೊನೆಯಲ್ಲಿ ಕರಾವಿಪದ ಉಪಾಧ್ಯಕ್ಷರಾದ ಶ್ರೀ ಚಳ್ಳಕೆರೆ ಯರ್‍ರಿಸ್ವಾಮಿಯವರು ಸಭೆಯಲ್ಲಿ ಭಾಗವಹಿಸಿ ಅಮೂಲ್ಯ ಸಲಹೆ–ಸೂಚನೆಗಳನ್ನು ನೀಡಿದ ಎಲ್ಲ ಸದಸ್ಯರಿಗೆ, ಕಾರ್ಯಕಾರಿ ಸಮಿತಿ ಸದಸ್ಯರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ವಂದನೆಗಳನ್ನು ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಡಾ॥ ವಸುಂಧರಾ ಭೂಪತಿ
ಗೌರವ ಕಾರ್ಯದರ್ಶಿ

ಎಸ್.ವಿ. ಸಂಕನೂರ
ಅಧ್ಯಕ್ಷರು